ಸಂಪುಟ ೯ ಅಗೋಸ್ತು

ಸಂಚಿಕೆ ೫ ಕನ್ನಡ ಬಳಗ ಪ್ರಕಾಶನ-ಮದರಾಸು ೧೯೮೮

---

ಸಂಪಾದಕ :

**ಕರಣಂ. ರಮೇಶ್**

ಉಪ ಸಂಪಾದಕರು :

**ಯಸ್. ರಾಮಚಂದ್ರ ಭಟ್; ಕೆ. ಜಿ. ದತ್ತಾತ್ರಿ ರಾವ್; ಸಿ. ವಿ. ಶಂಕರ ಶರ್ಮ**

ಸಲಹೆ :

**ಪ್ರೊ|| ಕೆ. ಕುಶಾಲಪ್ಪ ಗೌಡ; ಸಿ. ಆರ್. ಕೃಷ್ಣರಾವ್**
**ವಿ. ಯಸ್. ನರೇಂದ್ರ ನಾಥ್ ಪಿ. ಜಿ. ಶ್ರೀನಿವಾಸಮೂರ್ತಿ**

ಸಹಾಯ :

**ಎ. ಹೆಚ್. ಕೇಸರಿಪ್ರಸಾದ್; ಲೀಲಾ ಶೇಖರ್**

ಪ್ರಕಾಶನ :

**ಕನ್ನಡ ಬಳಗ (ರಿ) ಮದರಾಸು**

ವ್ಯವಹಾರಕ್ಕೆ ವಿಳಾಸ :
ಸಂಪಾದಕ, 'ಲಹರಿ', ನಂ. 13/ಬಿ ಮುರುಗೇಶ್‌ನಗರ್,
ರಂಗರಾಜಪುರಂ ರೋಡ್, ಕೋಡಂಬಾಕ್ಕಂ, ಮದರಾಸು-600 024.

**ಚಂದಾ ವಿವರ**

| | | | |
|---|---|---|---|
| ಮಹಾಪೋಷಕರು | 500-00 | ಪೋಷಕರು | 250-00 |
| ಆಜೀವಚಂದಾ | 100-00 | ವಾರ್ಷಿಕ ಚಂದಾ | 10-00 |

# ಲಹರಿಯ ಅಂತರಂಗ



---

**ಓದುಗರ ಅಭಿಪ್ರಾಯವೇ ಲಹರಿಯ ಚೇತನ!**
**ಚಂದಾದಾರರೇ ಲಹರಿಯ ಉಸಿರು !!**
**ಬರಹಗಾರರೇ ಲಹರಿಯ ಜೀವಾಳ !!!**

**ಚಂದಾ ಹಣ ಕಳುಹಿಸಿ ಲಹರಿಯನ್ನು ಪೋಷಿಸಿ**

# ನಿಮ್ಮೊಂದಿಗೆ ಒಂದೆರಡು ಕ್ಷಣ....

ಪ್ರತಿ ವರ್ಷದಂತೆ ಈ ವರ್ಷವೂ ಸಹ ನವೆಂಬರ್ ತಿಂಗಳಿನಲ್ಲಿ ಕರ್ನಾಟಕ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ತಯಾರಿ ನಡೆಯುತ್ತಿದೆ. ಈ ಬಾರಿಯ ರಾಜ್ಯೋತ್ಸವ ಸಮಿತಿ ಕೆಲವು ಒಳ್ಳೆಯ ನಿರ್ಧಾರಗಳನ್ನು ತೆಗೆದು ಕೊಂಡಿದೆ. ಅವುಗಳಲ್ಲಿ ಮುಖ್ಯವಾದುದು ಈ ಬಾರಿಯ ರಾಜ್ಯೋತ್ಸವ ಸಮಾರಂಭದಲ್ಲಿ ಮದಗಾಸಿನ ಹಲವು ಕನ್ನಡ ಸಂಘ ಸಂಸ್ಥೆಗಳ ಏಳಿಗೆಯಲ್ಲಿ ಸಕ್ರಿಯ ಪಾತ್ರವಹಿಸಿ, ಕನ್ನಡಕ್ಕಾಗಿ ದುಡಿದ ಮಹನೀಯರನ್ನು ಸನ್ಮಾನಿಸಲು ತೀರ್ಮಾನಿಸಿರುವುದು. ಈ ರೀತಿ ಮಾಡುವುದರಿಂದ ಇಂದು ತಮ್ಮದೇ ಆದ ರೀತಿಯಲ್ಲಿ ಕನ್ನಡಕ್ಕಾಗಿ ದುಡಿಯುತ್ತಿರುವ ಹಲವು ಕನ್ನಡ ಸಂಸ್ಥೆಗಳ ಯಶಸ್ಸಿನ ಹಿಂದಿರುವ ವ್ಯಕ್ತಿಗಳ ಕೆಲಸಕ್ಕೆ ಎಲ್ಲರ ಪರವಾಗಿ ಮನ್ನಣೆ ನೀಡಿ ಗೌರವಿಸಿ ದಂತಾಗುವುದಲ್ಲದೆ ಅವರ ದುಡಿಮೆ, ಸಕ್ರಿಯ ಪಾತ್ರ ಎಲ್ಲರಿಗೂ ತಿಳಿದಂತಾಗು ತ್ತದೆ. ಇದು ನಿಜಕ್ಕೂ ಶ್ಲಾಘನೀಯ ಕೆಲಸವೆನ್ನಬಹುದು.

ಇದೇ ರೀತಿಯ ಇನ್ನೊಂದು ಒಳ್ಳೆಯ ನಿರ್ಧಾರವೆಂದರೆ ಇದುವರೆಗೂ ಈ ವಿಧದ ದೊಡ್ಡ ಕಾರ್ಯಕ್ರಮಗಳಿಗೆ ಕರ್ನಾಟಕದಿಂದ ನಾಟಕ ತಂಡಗಳನ್ನು ಕರೆಯಿಸಿ ಕೊಂಡು ಸಾಂಸ್ಕೃತಿಕ ಕಾರ್ಯಕ್ರಮವೇರ್ಪಡಿಸಲಾಗುತ್ತಿದ್ದುದರಿಂದ, ಸ್ಥಳೀಯ ಉದಯೋನ್ಮುಖ ಪ್ರತಿಭೆಗಳಿಗೆ ತಮ್ಮ ಪ್ರತಿಭೆಯನ್ನು ದೊಡ್ಡ ರೀತಿಯಲ್ಲಿ ಪ್ರದರ್ಶಿಸಲು ಸಾಧ್ಯವಾಗುತ್ತಿರಲಿಲ್ಲ. ಈ ಬಾರಿ ಸ್ಥಳೀಯ "ರಂಗಚೇತನ" ಕಲಾವೃಂದಕ್ಕೆ ಅವಕಾಶಕೊಟ್ಟಿರುವುದು ಅನೇಕ ಉದಯೋನ್ಮುಖ ಯುವ ಕಲಾವಿದರಿಗೆ ಸ್ಫೂರ್ತಿ ನೀಡಿದಂತಾಗಿದೆಯಲ್ಲದೆ ಅವರ ಪ್ರತಿಭೆಗೆ ತಕ್ಕ ಪ್ರಶಸ್ತ್ಯ ವನ್ನೂ ನೀಡಿದಂತಾಗಿದೆ. ಈ ಅವಕಾಶವನ್ನು ರಂಗಚೇತನ ಉತ್ತಮ ರೀತಿ ಯಲ್ಲಿ ಉಪಯೋಗಿಸಿಕೊಳ್ಳಲಿ ಎಂದು ಹಾರೈಸುತ್ತಾ ಈ ಬಾರಿಯ ಭೇಟಿ ಮುಗಿಸುತ್ತೇನೆ. ಮತ್ತೆ ಮುಂದಿನ ಸಂಚಿಕೆಯಲ್ಲಿ ಸಂಧಿಸುವ.

— **ಸಂಪಾದಕ**

# ಅಭಿಪ್ರಾಯ ಲಹರಿ

ಲಹರಿಯ ಮೂಲಕ ತಮಿಳು ನಾಡಿನಲ್ಲಿರುವ ಕನ್ನಡಿಗರನ್ನು ಒಗ್ಗೂಡಿಸುವ, ಅವರಲ್ಲಿ ಕನ್ನಡ ಸಾಹಿತ್ಯಾಭಿಮಾನವನ್ನು ಉಂಟುಮಾಡುವ, ತಮ್ಮ ಪ್ರಯತ್ನ ನಿಜಕ್ಕೂ ಶ್ಲಾಘನೀಯವಾದುದು. ಪತ್ರಿಕೆ ಚಿಕ್ಕದಾಗಿದ್ದರೂ, ಕಥೆ, ಕಾವ್ಯ, ಲೇಖನ, ಹಾಸ್ಯ ಇತ್ಯಾದಿಗಳನ್ನೊಳಗೊಂಡು ಸಾಹಿತ್ಯಾಸಕ್ತರಿಗೆ ಉತ್ತಮ ಮನೋರಂಜನೆಯನ್ನು ಒದಗಿಸುತ್ತದೆ. ಸಾಹಿತ್ಯದ ಚಟುವಟಿಕೆಗಳಲ್ಲಿ ನೀವು ತೆಗೆದುಕೊಳ್ಳುವ ಶ್ರಮ ಸಾರ್ಥಕವಾಗಲಿ, ಲಹರಿಯ ಓದುಗರ ಬಳಗ ದಿನದಿಂದ ದಿನಕ್ಕೆ ವೃದ್ಧಿಸಲಿ ಎಂದು ಹಾರೈಸುವೆ.

**ನಂದಿನಿ ಡಿ. ಕಾಮತ್, ಮಂಗಳೂರು**

‡ ‡ ‡ ‡

ಜುಲ್ಯಾ ತಿಂಗಳ ಲಹರಿ ತಲಪಿತು. ಆದರೆ ಮುಖಚಿತ್ರ ನೋಡಿದೊಡನೆ ಇದ್ದ ಉತ್ಸಾಹ ಓದಿ ಮುಗಿಸಿದಾಗ ಇರಲಿಲ್ಲ. ಏಕೆಂದರೆ ನಯವಂಚಕರು ಕಥೆ ನಿರಾಸೆ ತಂದಿತು. ದೀರ್ಘವಾದ ಕಥೆ ನೋಡಿ ಆನಂದದಿಂದ ಓದಲು ಪ್ರಾರಂಭಿಸಿ, ಮುಗಿದಾಗ ಬೋರ್ ಹೊಡೆಯಿತು.

ಟಿವಿ 2ನೇ ಚಾನೆಲ್ ಬಗ್ಗೆ ಸಂಪಾದಕರ ಹರಿತವಾದ ಲೇಖನಿಯಿಂದ ಬಂದ ಹೇಳಿಕೆ ನಿಜವಾಗಿ ಶ್ಲಾಘನೀಯ. ಅವರು ಹೇಳಿದಂತೆ ಎಲ್ಲಾ ಕನ್ನಡಿಗರು ಒಟ್ಟಾಗಿ ಈ ಸೌರಭ ಕಾರ್ಯಕ್ರಮವನ್ನು 1ನೇ ಚಾನೆಲ್‌ಗೆ ಬದಲಾಯಿಸಲು ಮನವಿ ಸಲ್ಲಿಸಿದರೆ ದೂರದರ್ಶನದವರು ಬದಲಾಯಿಸುವರೇನೋ?

ಹಾಸ್ಯ ಲಹರಿ ಚೆನ್ನಾಗಿತ್ತು. ಅದರಲ್ಲಿ ಹೆಡ್ ಮಾಸ್ಟರೇ ಮಾಡಿದರು ತುಂಬಾ ಹಳಸಲು ನಗೆ ಲೇಖನವಾಗಿತ್ತು ಈ ಮೊದಲು ಒಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಉಳಿದವು ನಗಿಸುವುದರಲ್ಲಿ ಯಶಸ್ವಿಯಾಗಿದೆ ಇನ್ನೂ ಉತ್ತಮ ನಗೆ ಲೇಖನ ಪ್ರಕಟಿಸಿರಿ.

**ರಾಜಶೇಖರ ಯಸ್ ಮದರಾಸು**

‡ ‡ ‡ ‡

ಸೀಮಿತ ಕ್ಷೇತ್ರದಲ್ಲಿ ಚಿಕ್ಕದಾದರೂ ಚೊಕ್ಕಟವಾಗಿ ಉತ್ತಮ ತರದ ಪತ್ರಿಕೆ ಪ್ರಕಟಿಸುತ್ತಿದ್ದೀರಿ. ಕಥೆ ಮಾತ್ರ ಅರಗಿಸಲು ಕಷ್ಟವಾಯಿತು.

**ಐ. ಜಿ. ಭಟ್, ಕಲ್ಮಕಾರ್**

# ಶುಭ - ಮಿಲನ

ಏನೇ ನಿಂದಿನ್ನೂ ಅಲಂಕಾರವೇ ಮುಗಿದಿಲ್ಲವೇನೇ? ಅಲ್ಲಾ, ಮಗನಿಗೆ ಹೆಣ್ಣು ನೋಡೋಕೆ ಹೋಗ್ತಿರೋ ನೀನೇ ಒಳ್ಳೆ ಮದುವಣಗಿತ್ತಿ ಆಗ್ತಿದ್ದಿಯಲ್ಲಾ, ನಡೀ ನಡೀ ಅಲ್ಲಿ ಕಾಯ್ತಾ ಇರ್ತಾರೆ.

ಜಾನಕಮ್ಮ ಸೀರೆಯ ನೆರಿಗೆಯನ್ನು ಸರಿಪಡಿಸಿಕೊಳ್ಳುತ್ತಿದ್ದವರು ಗಂಡನನ್ನು ಒಮ್ಮೆ ತೀಕ್ಷ್ಣವಾಗಿ ನೋಡಿ, "ಹೌದ್ರಿ ನನ್ನ ಮದುವೆಯಲ್ಲಂತೂ ಚೆನ್ನಾಗಿ ಅಲಂಕಾರ ಮಾಡಿಕೊಳ್ಳಲಿಲ್ಲ. ಈಗ ಸೊಸೆಯ ಮುಂದಾದರೂ ಮದುವಣಗಿತ್ತಿ ಆಗೋಣಾಂತ"

ತಾವು ಮೊದಲು ಹೇಳಿದ್ದೇ ತಪ್ಪಾಯ್ತೆಂದುಕೊಂಡ ಸದಾಶಿವ ರಾಯರು ತಪ್ಪಿತಸ್ಥರಂತೆ ತಲೆ ಕೆಳಗೆ ಹಾಕಿ ಹೊರಟರು. ಬಾಗಿಲಲ್ಲಿ ಟಾಕ್ಸಿ ಶಬ್ದವಾದೊಡನೆ ಜಾನಕಮ್ಮ ಲಗುಬಗೆಯಿಂದ ಹೊರಬಂದರು. "ಅರವಿಂದ ಬಂದೇ ಬಿಟ್ಟ ಅಂತ ಕಾಣುತ್ತೆ. ಏನ್ಮಾಡ್ತಾ ಇದೀರಿ ಬನ್ನಿ" ಎಂದು ಹೊರಬಂದರು.

ಏನನ್ನೋ ಯೋಚಿಸುತ್ತಾ ಆರಾಮ ಕುರ್ಚಿಯಲ್ಲಿ ಕುಳಿತಿದ್ದ ಸದಾಶಿವರಾಯರು ನಿಟ್ಟುಸಿರು ಬಿಡುತ್ತಾ ಎದ್ದರು.

‡‡‡ ‡‡‡

ಟ್ಯಾಕ್ಸಿ ರಾಜಾರಾಯರ ಮನೆಯ ಮುಂದೆ ನಿಂತೊಡನೆ ಬೀಗರ ಸ್ವಾಗತಕ್ಕೆ ನಿಂತವರಂತಿದ್ದ ರಾಯರು ತಮ್ಮ ದೊಡ್ಡ ಧ್ವನಿಯಿಂದ "ಬರ್ಬೇಕೂ, ಬರಬೇಕು" ಎನ್ನುತ್ತಾ ತಾವೇ ಹತ್ತಿರ ಬಂದು ಒಳಗೆ ಕರೆದರು. ಬನ್ನೀಮ್ಮಾ ಬಾರಪ್ಪಾ. ಎಂದು ಮೂವರಿಗೂ ಸ್ವಾಗತ ಕೋರಿದರು. 16 ವರ್ಷದ ಹುಡುಗಿಯೊಬ್ಬಳು ಬಂದು ಜಾನಕಮ್ಮನವರಿಗೆ ಕುಳಿತುಕೊಳ್ಳಲು ಹೇಳಿದಳು. ರಾಜಾರಾಯರು 'ಇವಳೇ ನನ್ನ ಎರಡನೇಯ ಮಗಳು ಶಾಂತೀಂತ. ಪಿ.ಯು. ಸಿ. ಓದ್ತಾ ಇದ್ದಾಳೆ.'

"ಎಲ್ಲಿ ನಿಮ್ಮ ಮನೆಯವರು ಕಾಣ್ತಾ ಇಲ್ವಲ್ಲ" ಮಾತಿಗೆ ಯಾರೂ ಇಲ್ಲದೆ ಒಬ್ಬರೇ ಕುಳಿತ ಜಾನಕಮ್ಮನವರು ನಿಧಾನವಾಗಿ ಕೇಳಿದರು.

"ಬರ್ತ್ತಾಳೇ, ಎಲ್ಲೋ ಮಗಳಿಗೆ

ಕೊಂಡಿರ್ಬೇಕು" ಎನ್ನುತ್ತಾ ಹೆಂಡತಿಯನ್ನು ಕರೆಯಲು ಒಳಹೋದರು.

ಕೆಲ ನಿಮಿಷದಲ್ಲೇ ಸುಂದರ ಮೊಗದ ಮುತ್ತೈದೆಯೊಬ್ಬರು ರಾಜಾರಾಯರ ಜೊತೆಬಂದರು. "ಇವಳೇ ನನ್ನ ಹೆಂಡ್ತಿ, ಸುಲೋಚನಾ ಅಂತ."

ಜಾನಕಮ್ಮ ಸದಾಶಿವರಿಬ್ಬರೂ ನಮಸ್ಕಾರ ಎಂದು ಹೇಳಲು ಅವರ ಮುಖ ನೋಡಿ ಗಕ್ಕನೆ ಹಾಗೇ ನಿಂತರು. ಸುಲೋಚನಾರವರಿಗೂ ಅವರನ್ನು ನೋಡಿ ಆಶ್ಚರ್ಯವಾಗಿ ಹಾಗೇ ಕಣ್ಣರಳಿಸಿ ನೋಡತೊಡಗಿದರು. ಆ ಒಂದು ಕ್ಷಣದಲ್ಲಿ ಸದಾಶಿವರಾಯರ, ಜಾನಕಮ್ಮನವರ, ಸುಲೋಚನರ ಸ್ಮೃತಿ ಪಟಲಗಳು ಹಿಂದಕ್ಕೋಡಿದವು.

‡‡‡ ‡‡‡

ಜಾನಕಿ ಕೆಲಸಕ್ಕೆ ಸೇರಿದ ಹೊಸತು. ಮನೆಯಿಂದ ಸ್ವಲ್ಪ ದೂರ ನಡೆದು ಬಸ್‌ಸ್ಟಾಪಿಗೆ ಹೋಗುತ್ತಿದ್ದಳು. ಹಾಗೆ ಒಮ್ಮೆ ಬಸ್‌ಗಾಗಿ ಕಾಯುತ್ತಿರುವಾಗಲೇ ಒಬ್ಬ ಯುವಕನು ಬಂದು ತಾನು ಹೋಗುವ ಬಸ್ ನಂಬರನ್ನು ಹೇಳಿ, ಎಲ್ಲಿ ನಿಲ್ಲುತ್ತದೆ ಎಂದು ಕೇಳಿದನು.

ಇನೇ ಸ್ಟಾಪಿನಲ್ಲೇ ನಿಲ್ಲಬೇಕೆಂದು ಜಾನಕಿ ತಿಳಿಸಿದಳು. ದಿನಾ ಅವಳು ಬಸ್‌ಸ್ಟಾಪ್‌ಗೆ ಬರುವುದಕ್ಕೂ ಆ ಯುವಕನೂ ಅಲ್ಲಿಗೆ ಬರುವುದಕ್ಕೂ ಸರಿಯಾಗುತ್ತಿತ್ತು. ದಿನಾ ಇಬ್ಬರ ಕಣ್ಣುಗಳು ಮಾತನಾಡುತ್ತಿತ್ತೇ ವಿನಃ ಬಾಯಿಗೆ ಧೈರ್ಯವಿರಲಿಲ್ಲ. ಒಂದು ದಿನ ಆ ಯುವಕನೇ ಧೈರ್ಯದಿಂದ ತನ್ನ ಹೆಸರು ಸದಾನಂದನೆಂತಲೂ, ತಾನು ಒಂದು ಆಫೀಸಿನಲ್ಲಿ ಕೆಲಸದಲ್ಲಿರುವೆನೆಂದೂ, ಕೆಲವೊಮ್ಮೆ ಬೇರೆ ಬೇರೆ ಊರುಗಳಿಗೂ ಹೋಗುತ್ತಿರಬೇಕೆಂದೂ ತಿಳಿಸಿದನು.

ಅಂದಿನ ಆ ಪರಿಚಯು ಗಾಢವಾಗಿ ಪರಿಚಯು ಸ್ನೇಹಕ್ಕೆಡೆಯಾಗಿ, ಸ್ನೇಹ ಪ್ರೇಮಕ್ಕೆ ತಿರುಗುವುದು ತಡವಾಗಲಿಲ್ಲ. ಹೋಟೆಲ್, ಸಿನೇಮಾ ಹೆಚ್ಚಾಯಿತು. ಬೇಕೆಂದೆಡೆ ಸುತ್ತಿ ಬರುವುದು ಇಬ್ಬರಿಗೂ ಅಭ್ಯಾಸವಾಗಿತ್ತು.

ಆದರೆ ಒಂದು ದಿನ ಜಾನಕಿ ಬಸ್ ಸ್ಟಾಪಿಗೆ ಬಂದು ಹತ್ತು ನಿಮಿಷವಾದರೂ ಸದಾನಂದನ ಸುಳಿವಿಲ್ಲ. ಏನು ಕೆಲಸ ಇತ್ತೊ ಎಂದು ಸುಮ್ಮನಾದಳು. ಆದರೆ ಅದು ಒಂದು ದಿನಕ್ಕೆ ನಿಲ್ಲದೆ ತಿಂಗಳಾದರೂ ಪತ್ತೆಯಿಲ್ಲ. ಈಗ ಜಾನಕಿ ಯೋಚಿಸುವಂತಾಯ್ತು.

ಒಂದು ದಿನ ಬಸ್ ಸ್ಟಾಪ್‌ನಲ್ಲಿ ನಿಂತಿದ್ದಾಗ ಜಾನಕಿಗೆ ತಲೆಸುತ್ತಿ ಬಂದಂತಾಗಿ ಅಲ್ಲೇ ಕುಳಿತು ಬಿಟ್ಟಳು. ಐದು ನಿಮಿಷದಲ್ಲಿ ಸಾವರಿಸಿ ನಿಂತು, ಏನೋ ಯೋಚಿಸಿ ಗಾಬರಿಯಾಗಿ ಕಣ್ಣಲ್ಲಿ ಒಸರಿದ ನೀರನ್ನು ಯಾರಿಗೂ ಕಾಣದಂತೆ ಒರಸಿದಳು. ಅಂದಿನಿಂದ ಚಡಪಡಿಕೆ ಹೆಚ್ಚಾಗಿ ಅವನ ಅಡ್ರೆಸ್ ಗೊತ್ತಿಲ್ಲವಲ್ಲ ಈಗೇನು ಮಾಡುವುದು ತನ್ನ ಜೀವನದಲ್ಲಿ ಮೊದಲಬಾರಿಗೆ ಈ ಒದ್ದಾಟ. ಇದರ ಬಗ್ಗೆ ತಾಯಿ ಕೇಳಿದಾಗಲೆಲ್ಲಾ ಏನೋ ಸುಳ್ಳು ಹೇಳಿ ತಪ್ಪಿಸಿಕೊಂಡಿದ್ದಳು.

ಜಾನಕಿಯ ಮನದಲ್ಲಿ ನೂರಾರು

ಯೋಚನೆಗಳೆದ್ದಿದ್ದವು. ಆಕಸ್ಮಾತ್ ಅವರು ಬಾರದೇ ಇದ್ದರೆ, ಅವರು ಬರೀ ಮಾತಿನ ಮೋಡಿಯವರೇ ಆಗಿದ್ದು ಕಂಡ ಕಂಡ ಹೆಣ್ಣು ಮಕ್ಕಳಿಗೆಲ್ಲಾ ಹೀಗೆಯೇ ಮಾಡುತ್ತಿದ್ದರೇ.... ಹೀಗೆ ನೂರಾರು ಯೋಚನಾ ಅಲೆಗಳಲ್ಲಿ ಸಿಕ್ಕು ತೊಳಲಾಡುತ್ತಿದ್ದ ಜಾನಕಿಗೆ ದೂರದಲ್ಲಿ ಬರುತ್ತಿರುವನನ್ನು ಕಂಡು ಬಹಳ ಸಂತಸದಿಂದ ಅವನ ಹತ್ತಿರ ಹೋಗಿ, "ಯಾಕೆ ಇಷ್ಟು ದಿನವಾದ್ರೂ ನೀವು ಬರ್ಲೇ ಇಲ್ಲಾ. ನನಗೆಷ್ಟು ಭಯವಾಗಿತ್ತು ಗೊತ್ತಾ. ಯಾವೂರಿಗೆ ಹೋಗಿದ್ರಿ? ಅಂತೂ ಸಧ್ಯ ಬಂದ್ರಲ್ಲ" ತನ್ನ ಯಾವ ಮಾತಿಗೂ ಉತ್ತರಕೊಡದೇ ನಿಂತ ಸದಾಶಿವನ ಮುಖವನ್ನೊಮ್ಮೆ ದಿಟ್ಟಿಸಿದಳು. ಅವನು ಯಾವುದೂ ತನಗೆ ಕೇಳುತ್ತಿಲ್ಲವೆಂಬಂತೆ ನಿರ್ಲಿಪ್ತನಾಗಿದ್ದನು. ಜಾನಕಿ ಅವನ ಕೈಯನ್ನು ಹಿಡಿದು "ಸದಾ ಯಾಕೆ ಹೀಗಿದ್ದೀರಿ" ಎಂದು ಕೇಳಿದಳು.

ಸದಾಶಿವ ಅವಳ ಕೈಯಿಂದ ಬಿಡಿಸಿಕೊಂಡು ಎರಡು ಹೆಜ್ಜೆ ಹಿಂದೆ ಸರಿದು ತನ್ನ ಚೀಲದಿಂದ ಪತ್ರಿಕೆಯನ್ನು ತೆಗೆದು ಜಾನಕಿಯ ಕೈಗೆ ಕೊಟ್ಟು "ಖಂಡಿತಾ ಮದುವೆಗೆ ಬಾ" ಎಂದು ಹೇಳಿ ಹಿಂದಿರುಗಿ ನೋಡದೇ ಹೋದನು.

ಜಾನಕಿ ಒಂದು ಕ್ಷಣ ತಟಸ್ಥಳಾಗಿ ನಿಂತು ಬಿಟ್ಟಳು. ಅವಳ ಕಣ್ಣುಗಳಿಂದ ಉದುರಿದ ನೀರು ಪತ್ರಿಕೆಯ ಮೇಲೆ ಟಪ್ ಟಪ್ ಎಂದು ಸದ್ದು ಮಾಡಿದಾಗ ವಾಸ್ತವಕ್ಕೆ ಬಂದ ಜಾನಕಿ ಸದಾಶಿವನನ್ನು ಕೂಗಲು ಬಾಯ್ತೆರೆದಳು. ಆದರೆ ಅವನು ಆಗ ಬಹಳ ದೂರ ಹೋಗಿಯಾಗಿತ್ತು. ಆ ದಿನ ಅವಳು ಕೆಲಸಕ್ಕೆ ಹೋಗದೆ ಮನೆಗೆ ಬಂದಳು. ತಾಯಿ ಜಾನಕಿ ಬಂದದ್ದನ್ನು ಕಂಡು ಗಾಬರಿಯಾಗಿ 'ಯಾಕೆ ಕೆಲಸಕ್ಕೆ ಹೋಗ್ಲಿಲ್ಲವೇನಮ್ಮಾ' ಎಂದು ಕೇಳಿದರು. ಇಲ್ಲಮ್ಮಾ ಯಾಕೋ ತಲೆ ನೋಯ್ತಾ ಇತ್ತು, ಹಾಗೆಯೇ ಬಂದು ಬಿಟ್ಟೆ" ಎಂದವಳೇ ಸೀದ ರೂಂಗೆ ಹೋಗಿ ತಲೆ ಹಿಡಿದು ಕುಳಿತು ಬಿಟ್ಟಳು. ಕಣ್ಣೀರು ಸೀರೆಯ ನೆರಿಗೆಯ ಮೇಲೆ ಬೀಳುತ್ತಿತ್ತು ತಾಯಿ ಕೊಟ್ಟ ಬಿಸಿ ಕಾಫಿಯನ್ನು ಹೀರುತ್ತಾ ಪತ್ರಿಕೆಯನ್ನು ಬಿಡಿಸಲೋ ಬೇಡವೋ ಎಂಬಂತೆ ನಿಧಾನವಾಗಿ ಬಿಡಿಸಿದಳು. ಸದಾಶಿವನ ಹೆಸರಿನ ಜೊತೆಗೆ ಸುಲೋಚನಾ ಎಂಬ ಹೆಸರಿತ್ತು. ಜಾನಕಿ ಏನೋ ಯೋಚಿಸಿ ಮೇಲೆದ್ದಳು

ಮತ್ತೆರಡು ದಿನಗಳಲ್ಲಿ ಬಸ್‌ಸ್ಟಾಪಿನಲ್ಲಿ ಸದಾಶಿವನನ್ನು ಜಾನಕಿ ಕಂಡಾಗ ಸದಾಶಿವ ಮುಖವನ್ನು ಎತ್ತಲೋ ತಿರುಗಿಸಿದನು. ಜಾನಕಿಯೇ ಬಳಿ ಬಂದು "ಕಂಗ್ರಾಜ್ಯುಲೇಷನ್, ಖಂಡಿತಾ ಮದುವೆಗೆ ಬರ್ತೀನಿ. ಸುಲೋಚನ ಇದೇ ಊರಿನಲ್ಲಿದ್ದಾರಲ್ಲವೇ. ಅವರನ್ನೂ ಕರೆದುಕೊಂಡು ಈ ಭಾನುವಾರ ನೀವು ಊಟಕ್ಕೆ ಬನ್ನಿ.'

ಜಾನಕಿ ತನ್ನನ್ನು ಬೈಯ್ಯುತ್ತಾಳೆ ಬೇಡುತ್ತಾಳೆ, ಅಳುತ್ತಾಳೆ ಎಂದೆಲ್ಲಾ ಯೋಚಿಸಿದ್ದ ಸದಾಶಿವನಿಗೆ ಅವಳು ಹಾಗೆ ಹೇಳಿದ್ದು ಆಶ್ಚರ್ಯವೆನಿಸಿತು. ತಲೆಎತ್ತಿ ಜಾನಕಿಯತ್ತ ನೋಡಿದನು. ಅವಳ ಕಣ್ಣುಗಳಲ್ಲಿ ಯಾವುದೋ ನಿರ್ಧಾರದ ಕಳೆಯಿತ್ತು. ಅವನಿಗೆ ಅಲ್ಲಿ ಏನನ್ನೂ ಗುರುತಿಸಲಾಗಲಿಲ್ಲ. ಆಗಲಿ ಎಂದಷ್ಟೇ ನುಡಿದಿದ್ದ.

ಭಾನುವಾರ ಬೆಳಗ್ಗೆ ಜಾನಕಿ ಬೇಗ ಎದ್ದು ತಾನೂ ತಾಯಿಯ ಜೊತೆಗೆ ಅಡಿಗೆಗೆ ಸೇರಿದಳು. ನಂತರ ನೆಲ ಒರಸಿ ಕಸ ಗುಡಿಸಿ ಹೊರಗಿನ ಕುರ್ಚಿಯಲ್ಲಿ ಕುಳಿತು ಯೋಚಿಸತೊಡಗಿದಳು.

ಅಬ್ಬಾ ತನ್ನ ನಿರ್ಧಾರ ಎಂಥದು. ಇಂದು ಅವರಿಬ್ಬರನ್ನೂ ಊಟದ ನೆಪ ಮಾಡಿ ಕರೆಸಿ ಸದಾಶಿವನಿಗೆ ತನ್ನ ಪರಿಸ್ಥಿತಿಯನ್ನು ಹೇಳಿಬಿಡುವುದು. ಅಲ್ಲಿಗೂ ಅವನ ಮನಸ್ಸು ಕರಗದಿದ್ದರೆ ಅವನ ಮದುವೆಯ ದಿನವೇ ಎಲ್ಲಾ ಕಾರ್ಯಕ್ರಮಗಳು ಮುಗಿದ ಮೇಲೆ ಅವರಿಬ್ಬರಿಗೂ ಶುಭ ಹಾರೈಸಿ ಈ ಲೋಕದಿಂದಲೇ ದೂರ ತೆರಳುವುದು. ತಾನು ಅಂದುಕೊಂಡಿದ್ದು ಸರಿಯೇ ಎಂದೆಲ್ಲಾ ಯೋಚಿಸುತ್ತಿರುವಾಗ,

"ಏನ್ರೀ ಜಾನಕಿಯವರೇ ನಮ್ಮನ್ನು ಕರೆದು ನೀವು ಯೋಚಿಸುತ್ತಾ ಕುಳಿತುಬಿಟ್ರಿ" ಎಚ್ಚೆತ್ತು ನೋಡಿದಾಗ ಎದುರಿಗೆ ಸದಾಶಿವ ಸುಲೋಚನಾ ನಿಂತಿದ್ದರು. ಸುಲೋಚನಾ ಸುಂದರ ಯುವತಿ, ಯಾವ ಕಪಟವೂ ತಿಳಿಯದ ಕಂಗಳು, ಮುಂದೆ ಇಳಿಯಬಿಟ್ಟಿದ್ದ ಉದ್ದವಾದ ಜಡೆ, ಕಂಡೂ ಕಾಣದಂತಿರುವ ಪುಟ್ಟ ಕುಂಕುಮ, ಅವಳ ಮುಖಕ್ಕೆ ಸುಂದರವಾಗಿ ಕಾಣುತ್ತಿದ್ದ ಮೂಗು, ತಿಳಿನೀಲಿ ಬಣ್ಣದ ಜೈನಾಸಿಲ್ಕ್ ಸೀರೆಯಲ್ಲಿ ಮುದ್ದಾಗಿ ಕಾಣಿಸುತ್ತಿದ್ದ ಸುಲೋಚನಳನ್ನು ಮತ್ತೊಮ್ಮೆ ದಿಟ್ಟಿಸಿದಳು. ತನಗಿಂತ ಸುಂದರಿಯಾದ ಇವಳನ್ನು ಮೆಚ್ಚಿದ್ದು ಸದಾಶಿವನ ತಪ್ಪಿಲ್ಲವೆನಿಸಿತು.

'ಓ ಸಾರಿ ನಾನು ನೋಡ್ಲೇಇಲ್ಲ. ಏನೋ ಯೋಚಿಸುತ್ತಾ ಕುಳಿತುಬಿಟ್ಟೆ. ಬನ್ನಿ ಒಳಗೆ" ಎನ್ನುತ್ತಾ ಇಬ್ಬರನ್ನೂ ಒಳಗೆ ಕರೆದೊಯ್ದು ಅಮ್ಮನಿಗೆ ಪರಿಚಯ ಮಾಡಿಸಿದಳು.

ಮತ್ತೆರಡು ನಿಮಿಷದಲ್ಲೇ ಕಾಫಿ ರೆಡಿಯಾಯ್ತು. ಜಾನಕಿ ಸುಲೋಚನರೊಡನೆ ಮಾತನಾಡುತ್ತಾ ಅವಳ ಮಾತಿನ ಶೈಲಿ, ಬಿಚ್ಚು ಹೃದಯವನ್ನು ಮೆಚ್ಚಿಕೊಂಡಳು. ಸದಾಶಿವ ಯಾವುದೋ ಒಂದು ಆಶ್ಚರ್ಯವನ್ನು ನೋಡುತ್ತಿರುವಂತೆ ನೋಡತೊಡಗಿದನು. ತನಗೂ ಜಾನಕಿಗೂ ಯಾವುದೇ ಸಂಬಂಧವಿಲ್ಲದಂತೆ ಜಾನಕಿ ನಡೆದುಕೊಳ್ಳುತ್ತಿದ್ದುದನ್ನು ಕಂಡು ಮೂಕನಾಗಿದ್ದನು.

ಜಾನಕಿಯ ತಾಯಿ ಊಟಕ್ಕೆ ಕರೆದಾಗಲೇ ಮೂವರೂ ಮಾತನ್ನು ನಿಲ್ಲಿಸಿ ಒಳ ಬಂದದ್ದು. ಈಗಾಗಲೇ ಜಾನಕಿ ಸುಲೋಚನ ಬಹಳಷ್ಟು ಹತ್ತಿರವಾಗಿದ್ದರು. ಕೈ ತೊಳೆಯಲು ಹೋದ ಸದಾಶಿವನ ಹಿಂದೆಯೇ ಹೋದ ಜಾನಕಿ ಅವನಿಗೆ ನೀರು ಕೊಡುವ ನೆಪದಿಂದ "ಸದಾ, ನಿನ್ನೊಡನೆ ಸ್ವಲ್ಪ ಮಾತನಾಡುವುದಿದೆ. ದಯವಿಟ್ಟು ಹಿತ್ತಲಿನ ಮರದ ಹತ್ತಿರ ಬರ್ತೀರಾ"

ಇದುವರೆಗೆ ಜಾನಕಿಯ ಮಾತು, ನಡೆಯಿಂದ ಮೂಕನಾಗಿದ್ದ ಸದಾಶಿವ ಈಗೇನು ಹೇಳಬಹುದು ಎಂದು ಯೋಚಿಸಿ ಆಗಲಿ ಬರುತ್ತೇನೆ ಎಂದು ಹೇಳಿ ಒಳ ಬಂದು ಸುಲೋಚನಾ ಸರೋಜಮ್ಮ

ನವರ ಬಳಿ ಮಾತನಾಡುತ್ತಿರುವುದನ್ನು ಗಮನಿಸಿ, ಸೀದಾ ಹಿತ್ತಲ ಮರದ ಬಳಿ ಬಂದನು. ಆ ಹೊತ್ತಿಗಾಗಲೇ ಜಾನಕಿ ಅಲ್ಲಿ ಕಲ್ಲಿನ ಬೆಂಚಿನ ಮೇಲೆ ಕುಳಿತಿದ್ದಳು. ಅವಳಿಗೆ ಸ್ವಲ್ಪ ದೂರದಲ್ಲಿ ಅದೇ ಬೆಂಚಿನ ಮೇಲೆ ಅವನೂ ಕುಳಿತ ಜಾನಕಿ ಏನೂ ಮಾತನಾಡದಿರಲು ಸದಾಶಿವ ಅವಳ ಮುಖನ್ನೊಮ್ಮೆ ನೋಡಿದನು. ಇಷ್ಟು ಹೊತ್ತು ಎಲ್ಲಡಗಿತ್ತ್ತೋ ಕಣ್ಣೀರು ಈಗ ಜಾನಕಿಯ ಕೆನ್ನೆಗಳ ಮೇಲೆ ಬೀಳು ತ್ತಿತ್ತು.

"ಜಾನಕೀ ನೀನೇನೋ ಮಾತನಾಡಬೇಕೆಂದು ಹೇಳಿದೆಯಲ್ಲಾ ಏನು?"

"ಏನು! ಅಂದ್ರೆ, ನಮ್ಮಿಬ್ಬರ ನಡುವೆ ಇನ್ನು ಮಾತುಕತೆಗಳು ಮುಗಿದವೇ" ಎಂದು ಸದಾಶಿವನ ಕಡೆಗೆ ನೋಡಿ ಮತ್ತೆ ಏನನ್ನೂ ಹೇಳಲಾರದೆ ಬಿಕ್ಕಿದಳು. ಸದಾಶಿವ ಸ್ವಲ್ಪ ಸಹನೆ ಕಳೆದುಕೊಂಡವನಾಗಿ "ಜಾನಕಿ ಬೇಗ ಹೇಳು ನಾವೀಗ ಮನೆಗೆ ಹೋಗಬೇಕು. ಸುಲೋಚನಾಳ ಮನೆಯಲ್ಲಿ ಅವಳಿಗಾಗಿ ಕಾಯ್ತಾ ಇರ್ತಾರೆ".

"ಅಂದ್ರೆ ನಿನ್ಗೇ ಅವಳ ಬಗ್ಗೆ ಅಷ್ಟು ಜವಾಬ್ದಾರಿ ಇದೆಯೇ"

"ಯಾಕಿಲ್ಲ, ನಾಳೆ ಅವಳು ನನ್ನ ಹೆಂಡತಿ ಆಗುವವಳು"

ಜಾನಕಿ ವಿಷಾದದಿಂದ ನಕ್ಕಳು. 'ಪರ್ವಾಗಿಲ್ಲ ಸದಾ, ಹೆಂಡತಿ ಆಗುವವಳ ಬಗ್ಗೆಯಾದ್ರೂ ಕಳಕಳಿ ಇದೆಯಲ್ಲ. ನಾನೋ ಬರೀ ಗೆಳತಿ. ಸದಾಶಿವ, ನೀನೇನೋ ಗಂಡು, ಒಂದು ಹೆಣ್ಣಿನ ಜೊತೆ ಪ್ರೀತಿ, ಪ್ರೇಮ ಅಂತ ನಾಟಕ ಆಡಿ, ಅದರಲ್ಲಿ ಅನುಭವ ಪಡೆದು ಆ ಮೇಲೆ ಬೇರೊಬ್ಬಳೊಡನೆ ಮದುವೆ ಆಗ ಬಹುದು. ಸಮಾಜ ನಿನಗೆ ಏನೂ ಹೇಳೋಲ್ಲ, ಸಮಾಜಕ್ಕೆ ಗಂಡು ಏನೇ ಮಾಡಿದ್ರೂ ಕಾಣ್ಸಲ್ಲ. ಅದೇ ಹೆಣ್ಣು ಒಮ್ಮೆ ಒಂದೇ ಸಾರಿ ಜಾರಿದಳೆಂದರೆ, ಅಷ್ಟೇ ಏಕೆ, ಏನಾದ್ರೂ ನೆಪ ಸಿಕ್ಕಿದರೆ ಸಾಕು, ಅವಳು ಸಾಯೋವರೆಗೂ ಕ್ರೂರವಾಗಿ ಚುಚ್ಚಿ, ಚುಚ್ಚಿ ಚಿತ್ರಹಿಂಸೆ ಮಾಡುತ್ತೆ. ಈಗ ನೀನು, ನನ್ನೊಡನೆ ಆಡಿ, ಕೂಡಿ ಈಗ ಬೇರೆಯವಳೊಂದಿಗೆ ಮದುವೆ ಆಗ್ತಾ ಇದೀಯಾ. ಪಾಪ ಆ ಮುಗ್ಧೆ ಸುಲೋಚನಾಳಿಗೇನು ಗೊತ್ತು, ನೀನೊಬ್ಬ ವಂಚಕ, ಒಂದು ಹೆಣ್ಣಿಗೆ ಮೋಸ ಮಾಡಿದವನೆಂದು ..."

ಮುಂದೆ ಕೇಳಲಾರದೇ ಸದಾಶಿವ, "ಜಾನಕೀ ನಿನಗೇನಾಗಿದೆ, ಯಾಕ್ಹೀಗೆ ಅರಚುತ್ತಿದ್ದಿಯಾ, ನಿನ್ನ ಸ್ನೇಹ ಬೇಕು ಅಂದಿದ್ದೇ ವಿನಃ ನಿನ್ನನ್ನು ಮದುವೆ ಆಗ್ತೀನಿ ಅಂತ ನಾನೇನು ನಿನ್ಗೆ ಹೇಳಿರಲಿಲ್ಲ, ಇಷ್ಟಕ್ಕೂ ಈಗ ನಿನಗೇನಾಗಿದೆ ಹುಚ್ಚಿ ತರಹಾ ಅರಚ್ತಾ ಇದೀಯೇ. ಯಾರಾದ್ರೂ ಕೇಳಿದಲ್ಲಿ ನನ್ನ ಮಾನ ಮರ್ಯಾದೆ ಏನಾಗತ್ತೆ"

"ನಿಮ್ಗೂ ಮಾನ ಮರ್ಯಾದೆ ಅಂತ ಇದ್ಯಾ, ಏನೂ ತಿಳಿಯದಿರುವಂತೆ ಏನಾಗಿದೆ ಅಂತಿದ್ದೀರಲ್ಲಾ, ನನಗೀಗ ಎರಡು ತಿಂಗಳು ದಾಟಿದೆ. ಈಗ್ಹೇಳಿ ನಾನೇನ್ಮಾಡ್ಲಿ, ಹೇಗೆ ಮುಖ ಎತ್ತಿ ಓಡಾಡ್ಲಿ. ಸಮಾಜದ ಕ್ರೂರ ದೃಷ್ಟಿಯನ್ನು ಹೇಗೆ ಎದುರಿಸಲಿ ಹೇಳಿ."

"ಅದು ನನ್ನ ತಪ್ಪೇ, ನೀನು ಹೆಣ್ಣೆಂಬುದು ನಿನಗೇ ಆಗ ಗೊತ್ತಾಗದಿದ್ದಾಗ, ನಾನಾದ್ರೂ ಗಂಡು ಏನ್

ಮಾಡ್ಲಿ, ನಿನ್ನ ಕರ್ಮ, ನಿನಗೆ ಹೇಗೆ ಬೇಕೋ ಹಾಗೆ ಮಾಡು."

ಜಾನಕಿಗೆ ದುಃಖ ತಡೆಯಲಾರದೆ ಅತ್ತಳು. ಸದಾಶಿವ ಏನೂ ಹೇಳದೆ ಒಂದೆರಡು ನಿಮಿಷ ಹಾಗೇ ನಿಂತಿದ್ದು ಒಳಗೆ ಹೋದನು. ಜಾನಕಿ ನಿಧಾನ ವಾಗಿ ಮೇಲೆದ್ದು ಮುಖ ತೊಳೆದು, ಒಳ ಬಂದಳು. ಇವಳ ಅತ್ತ ಮುಖ ವನ್ನೊಮ್ಮೆ ಸುಲೋಚನಾ ದಿಟ್ಟಿಸಿ, ಮರು ಮಾತನ್ನಾಡದೇ ಸುಮ್ಮನಾದಳು.

*** ***

ಮದುವೆ ಮನೆಯಲ್ಲಿ ಜಾನಕಿ ಅತಿಯಾಗಿ ಅಲಂಕಾರ ಮಾಡಿಕೊಳ್ಳದೇ ಓಡಾಡಿದಳು. ಸುಲೋಚನಾಗೆ ಅಲಂಕಾರ ಮಾಡುವುದರಿಂದ ಹಿಡಿದು ತನಗೆ ತಿಳಿದ ಕೆಲಸವನ್ನೆಲ್ಲಾ ಮಾಡಿ ದಳು. ಮಧ್ಯೆ ಮಧ್ಯೆ ಸುಲೋಚನಾ, ಜಾನಕಿಯ ನಗುವಿನ ಹಿಂದಿನ ನೋವನ್ನು ಹುಡುಕಿ ಕನಿಕರ ಪಟ್ಟದ್ದೂ ಉಂಟು.

ಸುಲೋಚನಾ ಹಸೆಯ ಮೇಲೆ ಕುಳಿತಾಗ ಜಾನಕಿ ತನ್ನ ಪಕ್ಕದಲ್ಲಿ ಇರ ಬೇಕೆಂದು ಹೇಳಿದಾಗ ಜಾನಕಿ 'ನಾನು ಯಾಕೆ ನಿಮ್ಮ ಪಕ್ಕ ಇರ್ಲಿ. ನಿಮ್ಮ ಭಾವೀ ಪತಿಯವರೇ ನಿಮ್ಮ ಪಕ್ಕ ಕುಳಿ ಕುಳಿತಿದ್ದಾರಲ್ಲಾ. ಇನ್ನೇನು ಸ್ವಲ್ಪ ಹೊತ್ತಷ್ಟೇ, ಆಮೇಲೆ ಅವರೇ ನಿಮ್ಮ ಜೊತೆ ಇರ್ತಾರೆ.' ಈ ಮಾತುಗಳ ಗೇನೂ ಸುಲೋಚನಾ ಅತಿಯಾಗಿ ನಾಚಿಕೆಯನ್ನು ವ್ಯಕ್ತ ಪಡಿಸಲಿಲ್ಲ. ಸದಾ ಗಂಭೀರೆಯಾದ ಆಕೆ ಈ ವೇಳೆಯಲ್ಲಿ ಅತಿ ಗಂಭೀರೆಯಾಗಿದ್ದಳು.

ಇನ್ನೇನು ತಾಳಿ ಕಟ್ಟುವ ಮುಹೂರ್ತ ಬಂದೇ ಬಿಟ್ಟಿತು. ತಾಳಿಯು ಎಲ್ಲಾ ಹಿರಿಯರ ಆಶೀರ್ವಾ ದವನ್ನು ಪಡೆದು ಸದಾಶಿವನ ಕೈಗೆ ಬಂದಿತು. ಪುರೋಹಿತರ ಮಾಂಗಲ್ಯಂ ಸಂತು ನಾನೇನ ಶುರುವಾದೊಡನೇ ಸದಾ ಶಿವ ಮಾಂಗಲ್ಯವನ್ನು ಸುಲೊ.ಚನಾಳ ಕೊರಳ ಹತ್ತಿರ ತಂದನು. ತಟ್ಟನೆ ಎಲ್ಲರಿಗೂ ಆಶ್ಚರ್ಯವಾಗುವಂತೆ, ತಾಳಿಗೆ ಕೈಯಡ್ಡ ಹಿಡಿದು ನಿಂತು ಬಿಟ್ಟಳು ಸುಲೋಚನಾ. ಬಂದ ಜನರೆಲ್ಲಾ ಕೌತುಕವನ್ನು ಕಂಡವರಂತೆ ಗುಸುಗುಸು ಮಾತನಾಡತೊಡಗಿದರು. ಯಾಕ್ಹೀಗೇ ಯಾಕ್ಹೀಗೆ ಎನ್ನುವಾಗಲೇ ಸುಲೋಚನ ಜೋರಾಗಿ ಕೂಗಿ ಎಲ್ಲರನ್ನೂ ಸುಮ್ಮ ನಿರುವಂತೆ ತಿಳಿಸಿ,

ಈ ತಾಳಿ ನನ್ನ ಕೊರಳಿಗಲ್ಲ. ಇದರ ಒಡತಿ ಇವರು ಎಂದು ಜಾನಕಿ ಯನ್ನು ತೋರಿಸಿದಳು. ಪುರೋ ಹಿತರೂ ಸೇರಿದಂತೆ ಸುಲೊಚನಾಳಿಗೆ ಏನಾಗಿದೆಯೆಂಬಂತೆ ನೋಡತೊಡಗಿದರು ಆಗ ಸುಲೋಬನಾ, ಸದಾಶಿವ ಮತ್ತು ಜಾನಕಿಯ ಪ್ರೇಮ ಪ್ರಕರಣವನ್ನು ಸಂಕ್ಷಿಪ್ತವಾಗಿ ತಿಳಿಸಿ ತಾನು ಅದನ್ನು ತಿಳಿದ ವಿಚಾರ ತಿಳಿಸಿದಳು.

ಸದಾಶಿವ ದಯವಿಟ್ಟು ಒಂದು ಹೆಣ್ಣಿಗೆ ಅನ್ಯಾಯವಾಗದಂತೆ ಈ ತಾಳಿ ಯನ್ನು ಕಟ್ಟಿ, ಜಾನಕಿಯನ್ನು ಬರೀ

ಗೆಳತಿಯನ್ನಾಗಿ ತಿಳಿದುಕೊಳ್ಳದೇ ಧರ್ಮ ಪತ್ನಿಯಾಗಿ ಸ್ವೀಕರಿಸಿ. ಆದಿನ ನೀವಿಬ್ಬರೂ ಮರದ ನೆರಳಲ್ಲಿ ಮಾತನಾಡುತ್ತಿದ್ದಾಗ ಆ ಹೊತ್ತಿನಲ್ಲಿ ನಾನು ಅಲ್ಲಿದ್ದು, ಕದ್ದು ಕೇಳಿಸಿಕೊಂಡೆ. ಜಾನಕಿಯ ಸಹನೆ, ಅದುವಿಟ್ಟ ನೋವು ಆಗ ನನಗೆ ಅರಿವಾಯ್ತು. ಆಕ್ಷಣ ನಾನು ಏನೂ ಹೇಳಲಾರದೇ, ಈದಿನ ಈ ವೇಳೆಗಾಗಿ ಕಾದು ಹೀಗೆ ಮಾಡಿದ್ದೆನೆ. ನಾನು ಮಾಡಿದ್ದು ತಪ್ಪಾಗಿದ್ರೂ ಪರ್ವಾಗಿಲ್ಲ. ನೀವೀಗ ಜಾನಕಿಯನ್ನು ಸ್ವೀಕರಿಸಲೇ ಬೇಕು ಎಂದು ಉಸಿರು ಕಟ್ಟುವಂತೆ ಮಾತನಾಡಿದಾಗ ಜನರೆಲ್ಲ ಮೂಕರಾಗಿ ಸಿನೆಮಾದಲ್ಲಿ ನೋಡುವಂತೆ ನೋಡುತ್ತಿದ್ದರು.

ಸದಾಶಿವನ ಕೈಯಲ್ಲಿದ್ದ ಮಾಂಗಲ್ಯ ಈಗ ಜಾನಕಿಯ ಕೊರಳ ಸೇರಿತ್ತು. ಈಗ ಜಾನಕಿ ಸಂತೋಷದಿಂದ ಕಣ್ಣೀರು ಹಾಕಿದರೆ, ಸುಲೋಚನಾ ಸಂತೃಪ್ತಿಯಿಂದ ಕಣ್ಣೀರು ಹಾಕಿದಳು.

*** ***

ಏನು ಎಲ್ಲರೂ ಒಳ್ಳೆ ಗರ ಬಡಿದ ಹಾಗೆ ನಿಂತ್ ಬಿಟ್ಟಿದ್ದೀರಿ ಎಂದು ರಾಜಾರಾಯರ ಧ್ವನಿಗೆ ಸುಲೋಚನಾ ಸಾವರಿಸಿಕೊಂಡು ಜಾನಕಿ ಸದಾಶಿವರನ್ನು ಮಾತಿಗೆಳೆದರು. ಜಾನಕಮ್ಮನ ಕಣ್ಣಿಂದ ನೀರು ಧಾರೆಯಾಗುತ್ತಿರುವುದನ್ನು ಕಂಡು ಸುಲೋಚನಾ ಆಕೆಯ ಬಳಿಗೆ ಬಂದರು.

'ಈ ಒಳ್ಳೆ ಸಂದರ್ಭದಲ್ಲಿ ಕಣ್ಣೀರ್ಯಾಕೆ'

'ನಾನು ದುಃಖದಿಂದ ಕಣ್ಣೀರು ಹಾಕ್ತಾ ಇಲ್ಲ. ನೀವು ಸಿಕ್ಕಿದ ಸಂತೋಷ.' ತನ್ನ ಬಾಳಿನ ದೇವತೆಯನ್ನು ಜಾನಕಿಗೆ ಆಕ್ಷಣದಲ್ಲಿ ಕಂಡು ಹೇಗಾಗಿರಬೇಡ.

"ನಮ್ಮ ಹುಡುಗಿನ್ನ ನೋಡ್ತಿರೋ ಇಲ್ಲಾ ಹೀಗೆ ಒಬ್ರಗೊಬ್ರು ಸಮಾಧಾನ ಮಾಡಿಕೊಳ್ತಾ ಕೂತುಕೊಳ್ಳುತ್ತಿರೋ' ರಾಯರು ಧ್ವನಿ ಎತ್ತಿದರು.

ಸದಾಶಿವ, ಜಾನಕಮ್ಮ ಸುಲೋಚನಾ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಕಿರುನಗೆ ನಕ್ಕರು.

ಇದುವರೆಗೂ ಇವರು ಮಾಡುವುದನ್ನೆಲ್ಲಾ ಕೌತುಕದಿಂದ ದಿಟ್ಟಿಸುತ್ತಿದ್ದ ರಾಯರು ಈಗ ಸುಲೋಚನಾರನ್ನು ಕೇಳೇಬಿಟ್ಟರು. ಆಮೇಲೆ ಹೇಳುತ್ತೇನೆಂದ ಸುಲೋಚನಾ ಮಗಳನ್ನು ಕರೆಯಲು ಒಳಹೋದರು. ಕೆಲವು ನಿಮಿಷಗಳಲ್ಲೇ ತಾಯಿಯ ಜೊತೆಯಲ್ಲಿ ಬಂದ ರಂಜನಿ ಜಾನಕಮ್ಮನ ಪಕ್ಕದಲ್ಲಿ ಕುಳಿತಳು.

'ಒಂದು ಸಾರಿ ಹುಡುಗ - ಹುಡುಗಿ ಒಬ್ರಿಗೊಬ್ರು ನೋಡಿಕೊಂಡು ಬಿಡಿ. ಆಮೇಲೆ ನೋಡ್ಲೇ ಇಲ್ಲ ಎಂದು ಹೇಳಬೇಡಿ' ಎಂದ ರಾಜಾರಾಯರ ಹಾಸ್ಯದ ಮಾತಿಗೆ ಎಲ್ಲರೂ ನಕ್ಕರು. ರಂಜನಿ,

ನಾಚಿಕೆಯಿಂದ ತಲೆಎತ್ತಿ ಅರವಿಂದನ ದಿಟ್ಟನೋಟಗಳಿಗೆ ತನ್ನ ನೋಟ ಸೇರಿಸಿದಳು. ಇದುವರೆಗೂ ಹೆಚ್ಚು ಮಾತನಾಡದಿದ್ದ ಸದಾಶಿವರಾಯರು "ಶುಭಸ್ಯ ಶೀಘ್ರಂ." ಇನ್ನು ಆದಷ್ಟು ಬೇಗ ಮದುವೆ ಏರ್ಪಾಡು ಮಾಡಿಬಿಡಿ ಎಂದಾಗ ಜಾನಕಮ್ಮ, ಸುಲೋಚನಾರ ಮುಖ ಆನಂದದಿಂದ ತುಂಬಿತು.

○

— ಶಾರದಾ ರೂಪನಗುಡಿ

---

ಕಾವ್ಯ ಲಹರಿ

# ಧನಿಕರ ತವರೂರು

ನನ್ನ ಮೆಚ್ಚಿನ ಬೆಂಗಳೂರು
ಹೆಸರಿಗಿದು ಕನ್ನಡಿಗರ ತವರೂರು
ಕನ್ನಡೇತರರು ಇಲ್ಲಿ ಆಸ್ತಿವಂತರು, ಬಹು ಸಂಖ್ಯಾತರು
ಕನ್ನಡಿಗರು ಹಣವಿಲ್ಲದವರು, ಅಲ್ಪ ಸಂಖ್ಯಾತರು।

ಅಡ್ವಾನ್ಸ್ ಇಲ್ಲದೆ ಸಿಗದು ಬಾಡಿಗೆಗೆ ಮನೆಗಳು
ಡೊನೇಷನ್ ಇಲ್ಲದೆ ಸಿಗದು ಅಂಗಡಿಯ ಲೈಸೆನ್ಸ್‌ಗಳು
ಕ್ಯಾಪಿಟೇಷನ್ ಇಲ್ಲದೆ ಸಿಗದು ಕಾಲೇಜಿನ ಸೀಟುಗಳು
ಒಟ್ಟಿನಲ್ಲಿ ಹಣವಿಲ್ಲದೆ ನಡೆಯದು ನಿಮ್ಮಯ ಕೆಲಸಗಳು॥

ಓ! ನನ್ನ ಮೆಚ್ಚಿನ ಬೆಂಗಳೂರು
ನೀನಾಗಿರುವೆ ಧನಿಕರ ತವರೂರು॥

○

— ಡಿ. ಪಿ. ಮುರಳೀಧರ, ಬೆಂಗಳೂರು

ಕಾವ್ಯ ಲಹರಿ

# ದೇಶ

ಹರಿದ ಮನಗಳ ಜೋಡಿಸಿ
ಹೆಣೆದಿಹರು ರಾಷ್ಟ್ರವನು
ದುಗುಡ, ದುಮ್ಮಾನದಲಿ
ಹರಿ - ಹಾಯುತಲಿಹುದು

ಧರ್ಮ, ಕರ್ಮದ ಭಯವಿಲ್ಲ
ಮಾನವತ್ವದ ಹೃದಯವಿಲ್ಲ
ದೊಂಬಿ, ಕೊಲೆಗಳ ಮಧ್ಯೆ
ರಾಮ ರಾಜ್ಯದ ಕನಸು

ಗಾಂಧಿ ತತ್ವವ ಮರೆತು
ಬಡಿಯುತಿದೆ ಪ್ರಜೆಗಳನು
ಕರ್ಮಕಾಂಡದಿ ಬೆಂದು
ಶಾಂತಿಯನು ಅರಸುತಿದೆ

ಕಾಳಸಂತೆಯ ಹೊಕ್ಕು
ಸಂಪತ್ತಿನಾಗರದಿ ಮುಳುಗಿ
ದಮನ ದುಂದುಭಿಯಿಂದ
ಹೊರಳಾಡುತಿದೆ ದೇಶ

ದಕ್ಷನೆಂಬವನಿಲ್ಲ
ಶಿಕ್ಷೆ ಇಲ್ಲದೆ ಬೆಳೆಯುತಿದೆ
ಮುಕ್ತ ಬಂಧನ ಬಯಸಿ
ಕಠಿಣ ಬಾಳ ನೂಕಿ

— ಹೆಚ್. ಆರ್. ಕೃಷ್ಣಾಚಾರ್, ಮೈಸೂರು

# ಹಾಸ್ಯ ಲಹರಿ

## ದಶರಥನ ತಂದೆ ಏಕಾದಶರಥ

ಒಮ್ಮೆ ಟಪ್ಪುಸುಲ್ತಾನನಿಗೆ ರಾಮಾಯಣ ಕೇಳುವ ಚಪಲವಾಯಿತು. ವಿದ್ವಾಂಸರು ರಾಮಾಯಣ ಹೇಳಲು ಪ್ರಾರಂಭಿಸಿದರು. ರಾಮಾಯಣವನ್ನು ಕೇಳುತ್ತಿದ್ದಂತೆ ಟಿಪ್ಪು ನಡುವೆ ಪ್ರಶ್ನಿಸಿದ

'ರಾಮನ ತಂದೆ ದಶರಥ ಸರಿ, ಅವನ ತಂದೆ ಯಾರು?'

ವಿದ್ವಾಂಸರು ಉತ್ತರಿಸಿದರು ಆದರೆ ಟಿಪ್ಪು ಅದನ್ನೇ ಮುಂದುವರಿಸಿದ. ಅವನ ತಂದೆ ಯಾರು? ಉತ್ತರ ಹೇಳಿದರೆ ಮತ್ತೆ ಅವನ ತಂದೆ ಯಾರು? ಹೀಗೆ ಕೇಳಲು ಪ್ರಾರಂಭಿಸಿದ. ಎಲ್ಲ ವಿದ್ವಾಂಸರೂ ರಘು, ಭಗೀರಥ, ಅಂಶುಮಂತ, ಸಗರ ಅಲ್ಲಿಂದ ಮುಂದಕ್ಕೆ ಸೂರ್ಯನವರೆಗೂ ಹೋದರು.

ಸೂರ್ಯನ ತಂದೆ ಯಾರು? ಎಂದು ಟಿಪ್ಪು ಪ್ರಶ್ನಿಸಿದ. ವಿದ್ವಾಂಸರು ನಿರ್ಗುಣ ಬ್ರಹ್ಮನವರೆಗೂ ಹೋದರು. ನಿರ್ಗುಣ ಬ್ರಹ್ಮನ ತಂದೆ ಯಾರು? ಕೇಳಿದ ಟಿಪ್ಪು. 'ನಿರ್ಗುಣ ಬ್ರಹ್ಮನೇ ಈ ಎಲ್ಲ ಪ್ರಪಂಚದ ಸೃಷ್ಟಿಗೆ ಕಾರಣ. ಅವನಿಗೆ ತಂದೆ ತಾಯಿ ಯಾರೂ ಇಲ್ಲ" ಎಂದರು ವಿದ್ವಾಂಸರು. ಟಿಪ್ಪುವು ವಿದ್ವಾಂಸರನ್ನು ಹೀಯಾಳಿಸಿ ಕಳುಹಿಸಿದ.

ಆದರೆ ನಮ್ಮ ಗುಂಡನು ಅದನ್ನು ತಾನು ಹೇಳುತ್ತೇನೆಂದು ಮುಂದಾದ. ಪ್ರಶ್ನೆ ಆರಂಭವಾಯಿತು. ದಶರಥನ ತಂದೆ ಯಾರು? ಏಕಾದಶರಥ. ಅವನ ತಂದ ಯಾರು? ದ್ವಾದಶರಥ. ಅವನ ತಂದೆ ಯಾರು? ತ್ರಯೋದಶರಥ. ಹೀಗೆಯೇ ಸಹಸ್ರದಶರಥ, ದಶಸಹಸ್ರದಶರಥ, ಕೋಟಿದಶರಥದವರೆಗೆ ಸಂಖ್ಯೆ ಹೇಳುತ್ತಾ ಹೋದ ಗುಂಡ. ಕೇಳಿಕೇಳಿ ಟಿಪ್ಪುವಿಗೂ ಸುಸ್ತಾಯಿತು. "ನೀನೀಗ ನಿಜವಾದ ವಿದ್ವಾಂಸ" ಎಂದು ಹೇಳಿ ಅವನಿಗೆ ಬಹುಮಾನ ಕೊಟ್ಟು ಕಳುಹಿಸಿದ ಟಿಪ್ಪು.

## ಸಿಲಬಸ್‌ನಲ್ಲಿ ಇಲ್ಲ

ಶಾಲಾ ತನಿಖೆಗೆ ಬರುತ್ತಾರೆಂಬುದು ಉಪಾಧ್ಯಾಯರಿಗೆ ತಿಳಿಯಿತು. ಆಗ ಸಾಹೇಬರ ಮೆಚ್ಚುಗೆ ಪಡೆಯಬೇಕೆಂದು ಮೂರು ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡರು. ಮೊದಲನೇ ಪ್ರಶ್ನೆ : ಔರಂಗಜೇಬನು ಸಿಂಹಾಸನಕ್ಕೆ ಬಂದಾಗ ಏನು ಮಾಡಿದನು?

ಎರಡನೇ ಪ್ರಶ್ನೆ : ಮನುಷ್ಯನ ಉಪಯೋಗಕ್ಕೆ ಬರುವ ಸಾಧು ಪ್ರಾಣಿಗಳಲ್ಲಿ ಒಂದು ಕುದುರೆಯನ್ನು ನಾವು ಉದಾಹರಣೆಯನ್ನಾಗಿ ಇಟ್ಟುಕೊಳ್ಳಬಹುದು. ಇನ್ನೊಂದು ಉದಾಹರಣೆ ಕೊಡು.

ಮೂರನೇ ಪ್ರಶ್ನೆ : ದಶರಥನು ಮಕ್ಕಳನ್ನು ಪಡೆಯಲು ಏನು ಮಾಡಿದನು?

ಈ ಮೂರು ಪ್ರಶ್ನೆಗಳಿಗೆ ಉತ್ತರಗಳನ್ನು ಸಿದ್ಧಪಡಿಸಿ ಅವುಗಳನ್ನು ಬಾಲಕರಿಗೆ ಮನದಟ್ಟು ಮಾಡಿಸಿದರು. ಸಾಹೇಬರ ಆಗಮನವಾಯ್ತು. ಉಪಾಧ್ಯಾಯರ ಅಂತರಂಗ ಆನಂದದಿಂದ ತುಂಬಿಹೋಯಿತು "ವಿದ್ಯಾರ್ಥಿಗಳಿಗೆ ಏನಾದರೂ ಪ್ರಶ್ನೆ ಕೇಳಿ" ಎಂದರು ಸಾಹೇಬರು. ಹಾಗೆ ಹೇಳಿದುದೇ ತಡ "ಮೂರು ಪ್ರಷ್ನೆಗಳನ್ನು ಕೇಳುತ್ತೇನೆ ಸಾರ್" ಎಂದು ಹೇಳಿ ಉಚ್ಚ ಕಂಠದಲ್ಲಿ ಉಪಾಧ್ಯಾಯರು ತಮ್ಮ ಮೊದಲನೇ ಪ್ರಶ್ನೆ ಕೇಳಿದರು.

"ಔರಂಗಜೇಬನು ಸಿಂಹಾಸನಕ್ಕೆ ಬಂದಾಗ! ಏನು ಮಾಡಿದನು?

ಅಂದು ಅದಾವ ಕೀಟಲೆಯ ಕುಹಕದ ಬುದ್ಧಿ ವಿದ್ಯಾರ್ಥಿಗಳ ಅಂತರಂಗವನ್ನು ಹೊಕ್ಕಿತ್ತೊ, ಉಪಾಧ್ಯಾಯರ ಬಗ್ಗೆ ಹುಡುಗರಿಗೆ ಏನು ಬೇಸರವಾಗಿತ್ತೋ, ಎದ್ದು ನಿಂತು ವಿದ್ಯಾರ್ಥಿ, 'ಔರಂಗಜೇಬನು ಸಿಂಹಾಸನಕ್ಕೆ ಬಂದಾಗ ಕುಳಿತುಕೊಂಡ ಸಾರ್' ಎಂದುಬಿಟ್ಟ. ಉಪಾಧ್ಯಾಯರಿಗೆ ಕೋಪವೂ ಬಂತು; ನಿರಾಸೆಯೂ ಆಯಿತು. ಹೇಗೋ ಅದನ್ನು ನುಂಗಿಕೊಂಡರು. ತಮ್ಮ ತಂತ್ರ ವಿಫಲವಾಯಿತಲ್ಲ ಎಂದು ಕೊರಗಿದರು. ಇರಲಿ, ಎರಡನೆಯ ಪ್ರಶ್ನೆ ಕೇಳೋಣ, ಹೇಗಾಗುತ್ತೆ ನೋಡೋಣ ಎಂದುಕೊಂಡು ತಮ್ಮ ಎರಡನೇ ಪ್ರಶ್ನೆಯಾದ, 'ಮನುಷ್ಯನ ಉಪಯೋಗಕ್ಕೆ ಬರುವ ಸಾಕುಪ್ರಾಣಿಗಳಲ್ಲಿ ಒಂದು ಕುದುರೆಯನ್ನು ಉದಾಹರಣೆಯನ್ನಾಗಿ ಇಟ್ಟುಕೊಳ್ಳಬಹುದು. ಇನ್ನೊಂದು ಉದಾಹರಣೆಯನ್ನು ನೀನು ಕೊಡು' ಎಂದರು. ಆಗ ಎದ್ದು ನಿಂತ ಮತ್ತೊಬ್ಬ ವಿದ್ಯಾರ್ಥಿ "ಇನ್ನೊಂದು ಕುದುರೆ ಸಾರ್" ಎಂದು ಬಿಟ್ಟ.

ಉಪಾಧ್ಯಾಯರಿಗೆ ದಿಗ್ಭ್ರಮೆಯಾಯಿತು. ಇನ್ನು ಕೇಳಿ ಪ್ರಯೋಜನವಿಲ್ಲವೆಂದುಕೊಂಡರು. ಮೂರನೇ ಪ್ರಶ್ನೆಯನ್ನು ಕೇಳಲೇ ಇಲ್ಲ ದಶರಥನು ಮಕ್ಕಳನ್ನು ಪಡೆಯಲು ಏನು ಮಾಡಿದನೆಂದು ಕೇಳಿದರೆ ಇನ್ನು ಈ ಹುಡುಗರು ಹುಚ್ಚುಹುಚ್ಚಾಗಿ ಏನು ಹೇಳಿ ಬಿಡುತ್ತಾರೋ ಎಂದು ಅಂಜಿ ಆ ಪ್ರಶ್ನೆ ಕೇಳಲೇ ಇಲ್ಲ. ಸಾಹೇಬರು ಆಗ ಕೇಳಿದರು, 'ಅದೇಕೆ ಮೂರನೆಯ ಪ್ರಶ್ನೆಯನ್ನು ಕೇಳಲೇ ಇಲ್ಲವಲ್ಲಾ". ಆಗ 'ಅದು ಸಿಲಬಸ್‌ನಲ್ಲಿ ಇಲ್ಲ ಸಾರ್' ಎಂದು ಉಪಾಧ್ಯಾಯರು ತಿಳಿಸಿಬಿಟ್ಟರು.

— ಯೋಗಾಚಾರ್ಯ ಕೆ. ಕೇಶವಮೂರ್ತಿ

# ಕಿರಿಯರನ್ನು ಹಂಗಿಸುವ ಹಿರಿಯರಿಗೆ

ಇರಬಹುದು ಸ್ವಾಮಿ ನೀವೆಲ್ಲ ದೊಡ್ಡವರು
ಅಂದಮಾತ್ರಕ್ಕೆ ಸಿಕ್ಕ ಸಿಕ್ಕಂತೆ ಚಿಕ್ಕವರ
ಹೃದಯ ಮನಸ್ಸುಗಳನ್ನು ಏಕೆ ಬಾಡಿಸುತ್ತೀರಿ ಹೀಗೆ?
ಷಂಡರೂ ನಾವಲ್ಲ! ಭಂಡರೂ ಆಗಬೇಕಿಲ್ಲ
ನಿಜವಾದ ಗಂಡುಗಲಿಗಳೇ!
"ನಿಮ್ಮಿಂದ ಇದು ಸಾಧ್ಯವೇ? ಅದು ಸಾಧ್ಯವೇ?'
ಎಂದೆಲ್ಲ ಹಂಗಿಸುತ್ತ ಸುಮ್ಮನೇ
ನಮ್ಮಲ್ಲಿ ನಿಜಕ್ಕೂ ಇಲ್ಲದ ಕೀಳರಿಮೆಯನ್ನು
ನೀವೇ ಏಕೆ ಬಿತ್ತುತ್ತೀರಿ ಹೀಗೆ?
ನಮ್ಮಲ್ಲಿ ಹುದುಗಿರುವ ಆತ್ಮವಿಶ್ವಾಸಕ್ಕೆ
ಬೆಳಕು ಹಿಡಿದು ದಾರಿ ತೋರಿಸದೆ
ಮತ್ತೂ ಕತ್ತಲೆಯ ಆಳಕ್ಕೆ
ತಳ್ಳುತ್ತೀರೇಕೆ ಹೀಗೆ?
ಹೇಳಿ ಸ್ವಾಮಿ ಹೇಳಿ
ಮಾಡಬಹುದೇ ನೀವು ಹೀಗೆ?
ತಿಳಿದವರಾಗಿಯೂ ನೀವು
ನಮ್ಮ ಹಳತರ ಭವ್ಯತೆಯನ್ನು
ನೀವೇ ಹಳಿಯುತ್ತ ಅಳಿಸಿಹಾಕಲು
ಯತ್ನಿಸಿದರೆ - ಉಳಿಸುವವರಾದರೂ ಯಾರು?
ಹೋಗಲಿ ಹೊಸಭವಿತವ್ಯಕ್ಕಾದರೂ ಆಸೆ
ಇಟ್ಟುಕೊಳ್ಳಲು ಬಿಡದೆ ಉದಾಸೀನತೆಯನ್ನು
ನೀವೇ ಬಿತ್ತುತ್ತಿದ್ದೀರಿ ಏಕೆ ಹೀಗೆ?
ದಯವಿಟ್ಟು ಹೀಗೆ ಮಾಡಬೇಡಿ
ಹೇಡಿಗಳು ನಾವಂತೂ ಅಲ್ಲ
ಚೈತನ್ಯವಿದೆ ನಮ್ಮಲ್ಲಿ

ದೊಡ್ಡವರು
ಅರಿವು - ಅನುಭವಗಳುಳ್ಳವರು ನೀವು
ಹೇಳಿಕೊಡಬೇಕಿಲ್ಲ ನಿಮಗೆ ನಾವು
ಹಬ್ಬವೂ ಬೇಕು - ಹರಿದಿನವೂ ಇರಬೇಕು
ಹೊಸ ವರುಷ - ಹೊಸ ಹರುಷ ಬೇಕೇ ಬೇಕು
ಕನಸುಗಳು - ಆಸೆಗಳು ಇರಲೇಬೇಕು
ಯಾವುದೂ ಪೊಳ್ಳಲ್ಲ - ಯಾವುದೂ ಜೊಳ್ಳಲ್ಲ
ಆಚರಣೆಯ ದಿನಗಳಾದರೂ ಸಿಗುವ
ಸಿಗುತ್ತಲಿರುವ ಅಥವಾ ಸಿಕ್ಕಬಹುದಾದ
ಕಿಂಚಿತ್ ಸ್ಫೂರ್ತಿಗೂ ಕಲ್ಲು ಹಾಕಬೇಡಿ
ಹೊಸತು - ಹಳತರ ಮಧುರ ಬಾಂಧವ್ಯಕ್ಕೆ
ಸುಂದರ ಸೇತುವಾಗ ಬನ್ನಿ
ಹೊಸದೀಪಗಳ ಹಚ್ಚಿ ಆದರ
ಹೊಂಬೆಳಕಲ್ಲಿ ನಮಗೂ ಹೊಸ ಹೆಜ್ಜೆ
ಹಾಕಿಸಲು ಬನ್ನಿ - ಹೊಸ ಬದುಕು
ರೂಪಿಸಲು ಬನ್ನಿ - ತೆರೆದ ಹೃದಯ
ಮನಸ್ಸುಗಳಿಂದ
ಸಂತೋಷಿಸಲು ಬನ್ನಿ

— ಶಾಂತಾ ಜಗದೀಶ್



# ಮದರಾಸು ಕನ್ನಡಿಗರ ಎರಡನೇ ಸಮ್ಮೇಳನದ ಅಧ್ಯಕ್ಷರ ಭಾಷಣ (ಭಾಗ - 7)

ವ್ಯಾಸರಾಯ ಬಲ್ಲಾಳ್

ಹುಟ್ಟೂರಿನಲ್ಲೆ ಶಿಕ್ಷಣಾನುಕೂಲತೆಗಳು ಹೆಚ್ಚಿವೆ. ಇದರಿಂದಾಗಿ ರಾತ್ರಿ ಶಾಲೆಗಳು ಸೊರಗುತ್ತಿವೆ. ನಮ್ಮ ರಾಷ್ಟ್ರೀಯ ಜಾಗೃತಿಯ ಬೆನ್ನಲ್ಲಿ ಬಂದ ಭಾಷಾಭಿಮಾನದಿಂದಾಗಿ ತುಳುವರಲ್ಲದ ಕನ್ನಡಿಗರೂ ಮುಂಬಯಿಯಲ್ಲಿ ಕಟ್ಟಿರುವ ಕೆಲವು ಪ್ರೌಢ ಶಾಲೆಗಳಿಗೂ ಇಂಥ ಶಾಲೆಗಳಲ್ಲೂ ಪೋಷಕ ವಿದ್ಯಾರ್ಥಿಗಳಲ್ಲಿ ಬಹುಸಂಖ್ಯಾತರು ತುಳುವರೇ. ಈಗ ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯಲ್ಲಿ ಕನ್ನಡಕ್ಕೆ ಮಹತ್ವ ಕೊಡುವುದು ಸರಿಯಲ್ಲವೇನೋ ಎಂಬ ಭಾವನೆ ಬೆಳೆಯುತ್ತಿದೆ. ಇದರಿಂದಾಗಿ ಕನ್ನಡ ಮಾಧ್ಯಮದ ಮಾತಂತಿರಲಿ, ಕನ್ನಡ ಭಾಷಾಜ್ಞಾನವನ್ನು ಕೊಡುವ ವ್ಯವಸ್ಥೆಯನ್ನೂ ಕೈಬಿಡುವ ಯೋಜನೆಯನ್ನು ಕೆಲವು ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳು ಮಾಡುತ್ತಿವೆ. ರಾತ್ರಿ ಶಾಲೆಗಳ ಕನ್ನಡ ಮಾಧ್ಯಮ ಶಿಕ್ಷಣದ ಮೂಲಕ ತಮ್ಮ ಜೀವನಸ್ತರವನ್ನು ಸುಧಾರಿಸಿಕೊಂಡ ನಾಗರೀಕರೂ, ಅವರ ಆರ್ಥಿಕ ಮಟ್ಟ ಸುಧಾರಿಸಿದಂತೆಲ್ಲ ಆಯ್ಕೆಯ ಸ್ವಾತಂತ್ರ್ಯ ಬಂದಾಗ, ಪ್ರತಿಷ್ಠೆಗಳ ಸಂಕೇತವೆನಿಸುವ ಇಂಗ್ಲೀಷೇ ತಮ್ಮ ಮಕ್ಕಳಿಗೆ ಬೇಕು ಎಂದು ತೋರುತ್ತಿರುವಾಗ, ಕನ್ನಡವನ್ನು ಕೈಬಿಡುವ ಶಾಲೆಗಳ ನಿರ್ಧಾರದ ಹಿಂದಿರುವ ಅಸಹಾಯಕತೆ ಅರ್ಥವಾಗುತ್ತದೆ. ಅಲ್ಲದೆ ಮಹಾನಗರಗಳಲ್ಲಿ ಒಳ್ಳೆಯ ನಿವೇಶನಗಳನ್ನು ದೊರಕಿಸಿಕೊಳ್ಳುವುದು ಕಷ್ಟವಾಗಿ ಹೊಸ ಹೊಸ ಶಾಲೆಗಳು ಹುಟ್ಟಿಕೊಳ್ಳುವ ಸಾಧ್ಯತೆಗಳು ಕಡಿಮೆಯಾಗುತ್ತಿವೆ. ಹೀಗಿರುವಾಗ ಮುಂಬಯಿ, ಮದರಾಸುಗಳಂತಹ ಶಹರಗಳಲ್ಲಿ ಶಿಕ್ಷಣ ಸಂಸ್ಥೆಗಳ ಮೂಲಕವೇ ಕನ್ನಡದ ಭಾಷಾಜ್ಞಾನವನ್ನು ದೊರಕಿಸಿಕೊಳ್ಳಬೇಕಾದ ವ್ಯವಸ್ಥೆಯನ್ನು ನೆಚ್ಚಿಕೊಂಡಲ್ಲಿ, ಕನ್ನಡಿಗರಿಗೆ ಮಾತೃಭಾಷೆಯ ಜ್ಞಾನ ಆ ಮೂಲಕ ನುಡಿಯ ಸಂಸ್ಕಾರ, ಎಷ್ಟು ಕಾಲ ಉಳಿದೀತೆಂದು ಹೇಳುವುದು ಕಷ್ಟ. ಕನ್ನಡ ಭಾಷೆ, ಕನ್ನಡದ ಸಂಸ್ಕಾರಗಳು ಕೆಲವೇ ಜನರ ಅಸಕ್ತರ ಪ್ರೀತಿಯ ಕಾಯಕದಿಂದ ಬದುಕಬಹುದೇ ಎಂಬುದು ಯೋಚಿಸಬೇಕಾದ ಪ್ರಶ್ನೆ. ಇಷ್ಟೇ ಅಲ್ಲದೆ ಇಂಥ ಶಿಕ್ಷಣ ಸಂಸ್ಥೆಗಳು ಪರಭಾಷಾವಲಯಗಳಲ್ಲಿ ರಾಜ್ಯ ಸರಕಾರ ಭಾಷಿಕ ಅಲ್ಪಸಂಖ್ಯಾತರ ಕುರಿತು ಜನುಪಿಸುವ ಧೋರಣೆಗನುಗುಣವಾಗಿ ಕಾರ್ಯ ನಿರ್ವಹಿಸಬೇಕು. ಹೀಗಿರುವಾಗ ಸಾಕಷ್ಟು ಶಿಕ್ಷಣ ಸಂಸ್ಥೆಗಳು, ಕನ್ನಡದ ಕುರಿತ ಅಭಿಮಾನ, ಎರಡಕ್ಕೂ ಕೊರತೆಯೆನಿಸುವಾಗ ಮುಂಬಯಿ,

ಮದರಾಸುಗಳಂಥ ಮಹಾ ನಗರಗಳಲ್ಲಿ ಕನ್ನಡದ ಭವಿಷ್ಯದ ಬಗ್ಗೆ ಕಳವಳ ವುಂಟಾಗುವುದು ಸಹಜ. ಭಾಷಾ ಜ್ಞಾನಕ್ಕೆ ಕೊರತೆ ಬಂದಾಗ, ಭಾಷೆಯ ಮೂಲಕ ಪ್ರಕಟವಾಗಬೇಕಾದ ಸೃಜನ ಶೀಲ ಸಾಧ್ಯತೆಗಳನ್ನು, (ಉದಾ : ರಂಗ ಭೂಮಿ, ಸಾಹಿತ್ಯ ಮುಂತಾದುವು ಕಡೆ ಗಣಿಸುವುದು ಅನಿವಾರ್ಯವಾಗುತ್ತದೆ. ಮುಂಬಯಿಯಲ್ಲಿ ಕನ್ನಡದ ಉಚ್ಛ್ರಾಯ ಸ್ಥಿತಿಯ ಕಾಲದಲ್ಲಿ' ಎಂದರೆ ಸುಮಾರು ಹದಿಮೂರು ರಾತ್ರಿ ಶಾಲೆಗಳು ಹಲವಾರು ನಗರಪಾಲಿಕೆಯ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳು, ನಾಲ್ಕು ಪ್ರೌಢ ಶಾಲೆಗಳು, ಕನ್ನಡವನ್ನೇ ನೆಚ್ಚಿಕೊಂಡಿದ್ದಾಗ, 18 ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕನ್ನಡವನ್ನು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಳ್ಳುವ ಅವಕಾಶವಿದ್ದಾಗ, ಕನ್ನಡ ರಂಗಭೂಮಿಯ ಚಟುವಟಿಕೆಗಳು ಅಭಿಮಾನಪಡಬಹುದಾದಂಥ ರೀತಿಯಲ್ಲಿ ನಡೆಯುತ್ತಿದ್ದವು. ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ ಏಕಾಂಕ ನಾಟಕ ಸ್ಪರ್ಧೆಗಳಲ್ಲಿ ಇತರ ಪ್ರಮುಖ ಭಾಷೆಗಳ ಜತೆ ಸ್ಪರ್ಧಿಸಿಯೂ ಕನ್ನಡಿಗರು ಪ್ರಥಮ ಪಾರಿತೋಷಕ ಗೆದ್ದುಕೊಂಡುದಿದೆ. ಇಂದು ಏಕಾಂಕ ನಾಟಕ ಸ್ಪರ್ಧೆಗಳಲ್ಲಿ ಕನ್ನಡ ವಿದ್ಯಾರ್ಥಿಗಳು ಭಾಗವಹಿಸುವುದೇ ಇಲ್ಲ ಎನ್ನುವಂತಾಗಿದೆ. ಕನ್ನಡ ರಂಗಭೂಮಿಯ ಸ್ಥಿತಿಯೂ ಹೆಚ್ಚಿನ ಮಟ್ಟಿಗೆ ನಿಂತ ನೀರಿನಂತಿದೆ. ಹಲವು ಕಾಲೇಜುಗಳಲ್ಲಿ ಕನ್ನಡವನ್ನು ಆಯ್ದುಕೊಳ್ಳುವ ಇಚ್ಛೆಯುಳ್ಳ ವಿದ್ಯಾರ್ಥಿಗಳ ಕೊರತೆಯಿಂದಾಗಿ ಕನ್ನಡವನ್ನು ಕೈಬಿಡಲಾಗಿದೆ.

ಪ್ರಾಥಮಿಕ ಹಂತದಲ್ಲಿ ಮಾತೃಭಾಷೆಯ ಶಿಕ್ಷಣವನ್ನು ಒದಗಿಸುವ ಹೊಣೆಗಾರಿಕೆಯನ್ನು ಎಲ್ಲ ಒಪ್ಪಿಕೊಂಡಿರುವುದರಿಂದ ಇಂದು ಮುಂಬಯಿ ನಗರ ಪಾಲಿಕೆ ನಡೆಸುವ ಸುಮಾರು 54 ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಮೂಲಕ ಸಾವಿರಾರು ಬಡವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇವರೆಲ್ಲ ತೀರ ಬಡ, ಕೆಳ ಮಧ್ಯಮ ವರ್ಗಗಳಿಂದ ಬರುವಂಥವರು. ಆದರೆ ಇದರಿಂದಾಗಿಯೇ, ಹಿಂದೆ ಸ್ವಲ್ಪ ಕಾಲ ಕನ್ನಡದ ಆದರ್ಶದಿಂದ ಮೆರೆದಿದ್ದ ಕನ್ನಡಿಗರ ಕೆಲವು ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಿಗೆ ಇಂದು ಕನ್ನಡ ಮಾಧ್ಯಮವನ್ನು ಮುಂದುವರಿಸಲು ಸಾಧ್ಯವಾಗುತ್ತಿರುವುದು. ಎಲ್ಲಿ ಮಾಧ್ಯಮದ ಆಯ್ಕೆಯ ಸ್ವಾತಂತ್ರ್ಯವನ್ನು ಪೋಷಿಸುವ ಆರ್ಥಿಕ ಸ್ವಾತಂತ್ರ್ಯ ತಮಗಿದೆಯೆಂದೆನಿಸುವುದೋ ಅಲ್ಲಿ ಕನ್ನಡ ಭಾಷೆಯನ್ನೂ, ಕನ್ನಡ ಮಾಧ್ಯಮದ ಶಿಕ್ಷಣಾವಕಾಶವನ್ನೂ ಕೈಬಿಡುವುದು ತೀರಾ ಸಾಮಾನ್ಯವೆನಿಸಿದೆ. ಕರ್ನಾಟಕದಿಂದ ದೂರವಿರುವ ನಾವು ಕನ್ನಡದ ಪ್ರೀತಿಯೆಂದಷ್ಟೆ ಕನ್ನಡವನ್ನು ನೆಚ್ಚಿಕೊಂಡರೆ ನಮ್ಮ ಮಕ್ಕಳ ಭವಿಷ್ಯ ಹಾಳಾಗುವುದಿಲ್ಲವೇ ಎಂಬ ತೀರ ಸರಳೀಕೃತ ವ್ಯಾವಹಾರಿಕ ಅಭಿಪ್ರಾಯವನ್ನು ಎಲ್ಲರೂ ಕೊಡುತ್ತಾರೆ.

ತುಂಬ ಜಟಿಲವಾದುದೆನಿಸುವ ಈ ಪ್ರಶ್ನೆಗೆ ವ್ಯಾವಹಾರಿಕದ್ದೆನಿಸುವ ಉತ್ತರ

ಸಿಗುವಂತಿಲ್ಲ. ಇಂದಿನ ಶಿಕ್ಷಣ ವ್ಯವಸ್ಥೆಯೇ ಒಂದು ಗೊಂದಲಪುರವಾಗಿರುವಾಗ ಈ ಪ್ರಶ್ನೆಗೆ ಉತ್ತರಹೇಳುವುದೂ ಕಷ್ಟ. ಆದರೆ ಶಿಕ್ಷಣ ಉದ್ಯೋಗ ಬೇಟೆಯ ಒಂದು ಸಾಧನವಷ್ಟೇ ಅಲ್ಲ, ಜೀವನ ಪ್ರೀತಿಯನ್ನು ಒದಗಿಸಬೇಕಾದ ಒಂದು ಸಂಸ್ಕಾರ ಕೂಡ ಎಂದು ತಿಳಿದಾಗ, ಮಾತೃಭಾಷೆಯ ಸಂಬಂಧವನ್ನು ಉಳಿಸಿಕೊಳ್ಳುವ ಅವಕಾಶಗಳನ್ನು ಕೈಬಿಡುವುದು ಸರಿಯಲ್ಲವೆಂದು ಮನವರಿಕೆಯಾಗದಿರದು. ನಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ಗಟ್ಟಿಯಾಗಿಸುವ ಭಾಷೆಯ ಸಂಬಂಧ, ನಮ್ಮ ಕ್ರಿಯಾಶೀಲತೆಗೆ, ಸೃಜನಶೀಲತೆಗೆ ಸೌಂದರ್ಯ ಪ್ರಜ್ಞೆಗೆ ಪೋಷಕವಾಗಿ ಬರುವಂಥದು. ಈ ಸಾಂಸ್ಕೃತಿಕ ಅನನ್ಯತೆಯೇ ಭಾರತೀಯ ಅನನ್ಯತೆಯನ್ನು ಗಟ್ಟಿಯಾಗಿಸುವಂಥದು.

ಇಂದಿನ ಸಾಮಾಜಿಕ ಸಂದರ್ಭದಲ್ಲಿ ಕರ್ನಾಟಕದಿಂದ ದೂರವಿರುವ ಕನ್ನಡಿಗರು, ಪ್ರಾಥಮಿಕ ಹಂತದ ಕನ್ನಡ ಭಾಷಾಜ್ಞಾನವನ್ನಾದರೂ ಸಂಪಾದಿಸುವ ಅವಕಾಶವನ್ನು ಮಾಡಿಕೊಳ್ಳುವುದು ಅತ್ಯಗತ್ಯವೆಂದು ನನಗನಿಸುತ್ತದೆ. ಹೊರನಾಡಲ್ಲೂ ಇಂಗ್ಲೀಷಿನ ಭಾಷಾಜ್ಞಾನವನ್ನೂ ಒದಗಿಸುವ ಉಚ್ಚ ಮಟ್ಟದ ಕನ್ನಡ ಪ್ರಾಥಮಿಕ ಶಾಲೆಗಳನ್ನು ಕಟ್ಟಿಕೊಳ್ಳುವುದು ಅಸಾಧ್ಯವೆನಿಸುವ ಮಾತೇನಲ್ಲ. ಆಯ್ಕೆಯ ಸ್ವಾತಂತ್ರ್ಯವಿರುವ ಎಲ್ಲ ಪಾಲಕರೂ ಇಂದು ಶಿಕ್ಷಣ ಮಾಧ್ಯಮಕ್ಕಿಂತ ಹೆಚ್ಚು ಶಿಕ್ಷಣ ಸಂಸ್ಥೆಯ ಯೋಗ್ಯತೆ, ಗುಣಮಟ್ಟಗಳನ್ನು ಪರಿಶೀಲಿಸಿ, ತಮ್ಮ ಮಕ್ಕಳನ್ನು ಅಂಥ ಸಂಸ್ಥೆಗಳಿಗೆ ಕಳುಹಿಸ ಬಯಸುವುದು ತೀರಾ ಸಾಮಾನ್ಯ. ಒಳ್ಳೆಯ ಶಿಸ್ತು, ಶಿಕ್ಷಣಾವಕಾಶಗಳಿರುವ ಕನ್ನಡಿಗರ ಮಾಧ್ಯಮಿಕ ಪ್ರೌಢ ಶಾಲೆಗಳಲ್ಲೂ ಕನ್ನಡದ ಜೊತೆಗೆ ಸರಿಯಾದ ಇಂಗ್ಲೀಷಿನ ಭಾಷಾಜ್ಞಾನ ದೊರಕುವುದೆಂಬ ಭರವಸೆಯಿದ್ದಾಗ ಅಂಥ ಶಿಕ್ಷಣ ಸಂಸ್ಥೆಗಳನ್ನು ಆಶ್ರಯಿಸಲು ಕನ್ನಡೇತರರೂ ಅನುಮಾನಿಸುವುದಿಲ್ಲ. ಆದರೆ ಪ್ರಾಥಮಿಕ ಹಂತಗಳಲ್ಲಿ ಕನ್ನಡವನ್ನು ಆಶ್ರಯಿಸಬಯಸುವವರಿಗೆ, ಕಾಲೇಜುಗಳಲ್ಲೂ ಕನ್ನಡದ ಸಂಬಂಧವನ್ನು ಇರಿಸಿಕೊಳ್ಳಲು ಸಾಧ್ಯವಾಗುವಂತೆ, ಕನ್ನಡಿಗರೇ ನಡೆಸುವ ಉತ್ಕೃಷ್ಟ ಬೋಧನ ಕ್ರಮದಿಂದ ಎಲ್ಲ ವಿದ್ಯಾರ್ಥಿಗಳನ್ನು ಸೆಳೆಯುವ, ವಿಜ್ಞಾನ, ವಾಣಿಜ್ಯ ಶಿಕ್ಷಣಗಳನ್ನೂ ಒದಗಿಸುವ ಒಂದೆರಡಾದರೂ ಕಾಲೇಜುಗಳು ಮುಂಬಯಿ ಮದರಾಸು ಮುಂತಾದ ಕನ್ನಡಿಗರ ಜನಸಾಂದ್ರತೆಯಿರುವ ಶಹರಗಳಲ್ಲಿ ಇವೆಯೆಂದಾದರೆ, ಇಂಥ ಶಹರಗಳಲ್ಲಿ ಕನ್ನಡ ಬದುಕಿ ಉಳಿದೀತು, ಬೆಳೆದೀತು ಎಂದು ನಾನು ನಂಬಿದ್ದೇನೆ. ಶಾಲೆ, ಕಾಲೇಜುಗಳನ್ನು ಕಟ್ಟಿ ನಡೆಸುವುದು ದುಬಾರಿ ಖರ್ಚಿನ ಕೆಲಸವಾದರೂ, ಕರ್ನಾಟಕದ ಹೊರಗಿರುವ ಕನ್ನಡಿಗರ ಹಿತದೃಷ್ಟಿಯಿಂದ ಇಂಥ ಶಿಕ್ಷಣ ಸಂಸ್ಥೆಗಳಿಗಾಗಿ ನಿವೇಶನಗಳನ್ನು ದೊರಕಿಸಲು, ಕಟ್ಟಡಗಳನ್ನು ಕಟ್ಟಿಕೊಳ್ಳಲು ಕರ್ನಾಟಕ ಸರಕಾರವು ಎಲ್ಲ ರೀತಿಯ ಸಹಕಾರ ಕೊಡುವ ಅಗತ್ಯವಿದೆ.

[ಸಕ್ಷಿಪ್ತ]

# ವಾಸ್ತವ

ಈಗ ಬಂದೆಯಾ
ಶಶಿ ನೀನುದಿಸಿ.
ಹುಣ್ಣಿಮೆಗಾಗಿ ಹಂಬಲಿಸಿದೆ
ನಾನಂದು ಕ್ಷಣ ಕ್ಷಣಕ್ಕೂ
ಕೂಗಿ ಕೂಗಿ ಕೊರಗಿ
ಸೊರಗಿದರೂ
ಬಳಲಿ ಬೆಂಡಾದರೂ
ಕಣ್ಣೀರು ಕೆನ್ನೆ ತೋಯಿಸಿ
ಬತ್ತಿದರೂ ಬರಲಿಲ್ಲ!
ಬದುಕಿ ಸತ್ತು
ಬದುಕಿದರೂ ಬರಲಿಲ್ಲ
ಬಾಳ ಬೆಳದಿಂಗಳು
ಬೇಡಿದರೂ ಕೊಡಲಿಲ್ಲ
ಸುತ್ತ ಸುತ್ತಿ ಸತ್ತಾಗ
ನೀ ಬಂದೆ ದೇಹ ದರ್ಶನಕ್ಕೆ
ಬರದ ಬೇಗೆಗೆ ಸಿಕ್ಕಿ ಸುಟ್ಟು
ಕರಕಲಾಗೆತ್ತು ಭೂಮಿ.

○

— ಪ್ರಕಾಶ ಆಳ್ವ, ಉಜಿರೆ

## ರಸ್ತೆ ಸುರಕ್ಷತೆ
## ಇದು
## ಶಾಲೆಯಲ್ಲಿ ಪ್ರಾರಂಭವಾಗುತ್ತದೆ

ಅವರು ಚಿಕ್ಕವರಿದ್ದಾಗಲೇ ಕಲಿಸಿ.
ರಸ್ತೆ ಸುರಕ್ಷತಾ ಸಪ್ತಾಹದ ಅವಧಿಯಲ್ಲಿ
ಪ್ರತಿದಿನ ಪ್ರಾರ್ಥನೆಯ ನಂತರ ಎಲ್ಲಾ
ಶಾಲಾ ಶಿಕ್ಷಕರು ಮಕ್ಕಳಿಂದ ರಸ್ತೆ ಸುರಕ್ಷತೆ
ನಿಯಮಗಳನ್ನು ಪಾಲಿಸುವಂತೆ ಪ್ರತಿಜ್ಞೆ ಮಾಡಿಸಿ.

### ಪ್ರತಿಜ್ಞೆ

* ನಾನು ರಸ್ತೆಯನ್ನು ನಿಗದಿಪಡಿಸಿದ
  ಸುರಕ್ಷಿತ ಸ್ಥಳದಲ್ಲೇ ದಾಟುತ್ತೇನೆ.

* ನಾನು ರಸ್ತೆ ಪಕ್ಕದ ಕಾಲುದಾರಿಯ
  ತುದಿಯಲ್ಲೇ ನಿಲ್ಲುತ್ತೇನೆ

* ನಾನು ವಾಹನಗಳು ಬರುತ್ತಿವೆಯೇ
  ಎಂದು ಗಮನಿಸಿ, ಕೇಳಿಕೊಳ್ಳುತ್ತೇನೆ.

* ನಾನು ವಾಹನಗಳು ಬರುತ್ತಿದ್ದರೆ
  ಎಂದು ಸುತ್ತಲೂ ಗಮನಿಸಿ, ರಸ್ತೆಯನ್ನು
  ನೇರವಾಗಿ ದಾಟುತ್ತೇನೆ.

* ನಾನು ವಾಹನಗಳು ಬರುತ್ತಿರುವುದನ್ನು
  ನೋಡುತ್ತಾ, ಕೇಳಿಸಿಕೊಳ್ಳುತ್ತಾ
  ಗಮನವಿಟ್ಟು ರಸ್ತೆಯನ್ನು ದಾಟುತ್ತೇನೆ.

ಕರ್ನಾಟಕ ವಾರ್ತೆ